ುಪನ್ಯಾಸ
ಂಥಮಾಲೆ

೨೫೧

ಪ್ಲೇಟೋನ ಆದರ್ಶ ರಾಜ್ಯದ ರಾಜಕೀಯ ಸಿದ್ಧಾಂತಗಳು

ಪ್ರೊ. ಕೆ. ಎಮ್. ಮೊಹರವಾಡೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಕ್ಟೋಬರ, ೧೯೭೬

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೫೧

ಪ್ಲೇಟೋನ ಆದರ್ಶರಾಜ್ಯದ ರಾಜಕೀಯ ಸಿದ್ಧಾಂತಗಳು

ಪ್ರೊ. ಕೆ. ಎಂ. ಮೆಹರವಾಡೆ
ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಅಕ್ಟೋಬರ, ೧೯೭೬

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಅಕ್ಟೋಬರ, ೧೯೭೩

ಬೆಲೆ : ೨೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಅದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೫೦ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ನಿವೇದನೆ

ಯುರೋಪ ಖಂಡದ ಪುನರುತ್ಥಾನಕ್ಕೆ ಪ್ಲೇಟೋನ ಗ್ರಂಥಗಳೇ ಕಾರಣ. ಸುಮಾರು ೨೪೦೦ ವರ್ಷಗಳ ಹಿಂದೆ ಆತನು ವ್ಯಕ್ತಪಡಿಸಿದ ವಿಚಾರಗಳು ನಿಷ್ಕ್ರಿಯತೆಯಲ್ಲಿ ಹಾಗೂ ಅಂಧಕಾರದಲ್ಲಿ ಮುಳುಗಿದ್ದ ಪಾಶ್ಚಿಮಾತ್ಯ ಯುರೋಪ ಖಂಡಕ್ಕೆ ಬೆಳಕು ನೀಡಿದವು. ಅವನ ವಿಚಾರಗಳ ಪ್ರಭಾವ ಈಗ ವಿಶ್ವವ್ಯಾಪಿಯಾಗಿದೆ. ಆತನ ಗ್ರಂಥಗಳಲ್ಲಿ ಪ್ರಮುಖವಾದುದು 'The Republic'. ಆ ಗ್ರಂಥದಲ್ಲಿಯ ಪ್ರಮುಖ ರಾಜಕೀಯ ಸಿದ್ಧಾಂತಗಳನ್ನು ಮಾತ್ರ ಈ ಕಿರುಹೊತ್ತಿಗೆಯಲ್ಲಿ ಸಾದರಪಡಿಸಿದ್ದೇನೆ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣವಿಭಾಗವು ೯-೩-೧೯೭೬ ರಂದು ಸಜ್ಜಲಗುಡ್ಡದಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ ನಾನು ಹೇಳಿದ ಅನೇಕ ಅಂಶಗಳನ್ನು ಕೂಡಿಸಿ ಈ ಕಿರುಹೊತ್ತಿಗೆಯನ್ನು ರಚಿಸಲಾಗಿದೆ. ಪ್ರಕಟನೆಯ ಮುನ್ನ ನನ್ನ ಹಸ್ತಪ್ರತಿಯನ್ನು ಪರಿಶೀಲಿಸಿ ಉಪಯುಕ್ತ ಸಲಹೆ ಕೊಟ್ಟ ನಮ್ಮ ಕಾಲೇಜಿನ ಪ್ರಾಧ್ಯಾಪಕ ಸಹೋದ್ಯೋಗಿಗಳಿಗೂ ಮತ್ತು ನನ್ನ ಪೂಜ್ಯ ಗುರುಗಳಾದ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎ. ಎಂ. ರಾಜಶೇಖರಯ್ಯನವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು

ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಹಸ್ತಪ್ರತಿಯನ್ನು ಶೀಘ್ರದಲ್ಲಿ ಸಿದ್ಧಗೊಳಿಸಲು ಸ್ಫೂರ್ತಿನೀಡಿದ ಪ್ರಕಟನಶಾಖೆಯ ನಿರ್ದೇಶಕರಾದ ಶ್ರೀ ಸಿ. ಎಸ್. ಕಣವಿಯವರಿಗೆ ನಾನು ಚಿರಋಣಿ.

ಇಂಥ ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹ ಕೊಡುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನರಗುಂದ
೨-೧೦-೧೯೭೬

ಕೆ. ಎಂ. ನೆಹರವಾಡೆ

ಪರಿವಿಡಿ

೧. ಪೀಠಿಕೆ

ಗ್ರೀಕ ತತ್ವಜ್ಞಾನಿಗಳಲ್ಲಿ ಪ್ಲೇಟೊ ಅಗ್ರಗಣ್ಯ. ಪಾಶ್ಚಾತ್ಯರ ಜೀವನ, ಕಲೆ, ವಿಜ್ಞಾನ, ಶಿಕ್ಷಣ ಮುಂತಾದವುಗಳ ಮೇಲೆ ಅವನು ಗಾಢವಾದ ಪ್ರಭಾವ ಬೀರಿದ್ದಾನೆ. ಅವನು ಗ್ರಂಥಗಳನ್ನು ಬರೆದು ಇಂದಿಗೆ ಸುಮಾರು ೨೪೦೦ ವರ್ಷಗಳು ಸಂದಿದ್ದರೂ ಅವುಗಳ ಪ್ರಭಾವ ಕುಂದಿಲ್ಲ. ಇಂದಿಗೂ ಅವನ ಗ್ರಂಥಗಳನ್ನು ಬಹಳ ಆಸ್ಥೆಯಿಂದ ಎಲ್ಲ ದೇಶದ ಜನರೂ ಅಭ್ಯಸಿಸುತ್ತಾರೆ. ಆ ಗ್ರಂಥಗಳು ಅಷ್ಟು ವಿಚಾರ ಪ್ರಚೋದಕವಾಗಿವೆ; ಹೊಸ ಹೊಸ ತತ್ವಜ್ಞಾನಿಗಳಿಗೆ ಜನ್ಮ ಕೊಟ್ಟಿವೆ. ಪ್ಲೇಟೋ ಸೂಚಿಸಿದ ಸಣ್ಣ ಸಣ್ಣ ವಿವರಗಳನ್ನೇ ಪ್ರಮುಖವಾಗಿಟ್ಟುಕೊಂಡು ಹೊಸ ಸಿದ್ಧಾಂತಗಳು ರೂಪಿತವಾಗಿವೆ. ರಾಜ್ಯಶಾಸ್ತ್ರಜ್ಞರು ಪ್ಲೇಟೊ ಬರೆದ ೩೬ ಸಂವಾದ ಗ್ರಂಥಗಳಲ್ಲಿ ಮೂರು ಗ್ರಂಥಗಳಿಗೆ ಪ್ರಮುಖ ಸ್ಥಾನ ಕೊಟ್ಟಿದ್ದಾರೆ. ಅವು :

೧. ಆದರ್ಶರಾಜ್ಯ (The Republic)
೨. ಮುತ್ಸದ್ದಿ (The Statesman)
೩. ಕಾಯ್ದೆಗಳು (The Laws)

ವಿಮರ್ಶಕರು ಪ್ಲೇಟೋನ 'ಆದರ್ಶರಾಜ್ಯ'ವನ್ನು ತನ್ನ ೪೦ನೇ ವಯಸ್ಸಿನಲ್ಲಿ, 'ಮುತ್ಸದ್ದಿ' ಗ್ರಂಥವನ್ನು ತನ್ನ ೬೦ನೇ

ವಯಸ್ಸಿನಲ್ಲಿ ಮತ್ತು ಕೊನೆಯ 'ಕಾಯ್ದೆಗಳು' ಗ್ರಂಥವನ್ನು ತನ್ನ ಜೀವನಾಂತ್ಯದಲ್ಲಿ ಬರೆದಿದ್ದಾನೆಂದು ಅಭಿಪ್ರಾಯಪಟ್ಟಿದ್ದಾರೆ.

ಈ ಪ್ರಬಂಧ 'ಆದರ್ಶರಾಜ್ಯ' ಗ್ರಂಥದಲ್ಲಿಯ ಮುಖ್ಯ ರಾಜ್ಯಸಿದ್ಧಾಂತಗಳಿಗೆ ಸೀಮಿತ. ಅಭ್ಯಾಸ ಕ್ಷೇತ್ರವನ್ನು ಉದ್ದೇಶಪೂರ್ವಕವಾಗಿಯೇ ಸೀಮಿತಗೊಳಿಸಲಾಗಿದೆ. ಏಕೆಂದರೆ ಪ್ಲೇಟೋನ 'ಆದರ್ಶರಾಜ್ಯ' ಗ್ರಂಥ ಒಂದು ಜ್ಞಾನಭಾಂಡಾರ! ಅದು ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ನೀತಿಶಾಸ್ತ್ರ, ತತ್ವಜ್ಞಾನ, ಕಲೆ, ಸಾಹಿತ್ಯ, ಹೀಗೆ ಎಲ್ಲ ಜ್ಞಾನವಿಭಾಗಗಳನ್ನು ಒಳಗೊಂಡಿದೆ. ಆದುದರಿಂದ ಕೇವಲ ರಾಜಕೀಯ ವಿಚಾರಗಳನ್ನು ಮಾತ್ರ ವಿವೇಚಿಸಲಾಗಿದೆ.

೨. ಜೀವನ ಚರಿತ್ರೆ

ಪ್ಲೇಟೋನ ಜೀವನ, ಕಾಲ, ಮತ್ತು ಆತನ ಜೀವನದ ಮುಖ್ಯ ಘಟನೆಗಳು ಆತನ ವಿಚಾರಗಳನ್ನು ರೂಪಿಸಿದವು.

ಪ್ಲೇಟೋನ ಮೊದಲಿನ ಹೆಸರು ಅರಿಸ್ಟೋಕಲ್ಸ (Aristocles). ಆತನು ಅರಿಸ್ಟಾನನ ಪುತ್ರ. ಅಥೆನ್ಸ ನಗರದ ಒಂದು ಶ್ರೀಮಂತ ಮನೆತನದಲ್ಲಿ ಕ್ರಿ.ಪೂ. ೪೨೭ರಲ್ಲಿ ಜನಿಸಿದನು. ಆತನು ವಯಸ್ಸಿಗೆ ಬಂದಾಗ ಅಥೆನ್ಸ ನಗರ, ತನ್ನ ರಾಜಕೀಯ ಮಹತ್ವವನ್ನು ಕಳೆದುಕೊಂಡಿತ್ತು. ಪೆಲೊಪೆನ್ನೇಸಿಯನ್ ಯುದ್ಧ

ಕ್ರಿ.ಪೂ. ೪೩೧ ರಿಂದ ೪೦೪ ರ ವರೆಗೆ ಅಂದರೆ ಸುಮಾರು ೨೭ ವರ್ಷ ಅಥೆನ್ಸ ನಗರ ರಾಜ್ಯ ಹಾಗೂ ಸ್ಪಾರ್ಟಾ ನಗರ ರಾಜ್ಯಗಳ ನಡುವೆ ನಡೆಯಿತು. ಈ ಯುದ್ಧ ಪ್ರಪ್ರಥಮ ಸೈದ್ಧಾಂತಿಕ ಯುದ್ಧವಾಗಿತ್ತು. ಅಥೆನ್ಸ, ಪ್ರಜಾಪ್ರಭುತ್ವ ತಳಹದಿಯ ಮೇಲೆ ರಚಿತವಾದ ನಗರರಾಜ್ಯ. ಸ್ಪಾರ್ಟಾ ಸೈನಿಕ ಸರ್ವಾಧಿಕಾರಕ್ಕೆ ಒಳಪಟ್ಟ ನಗರರಾಜ್ಯ. ಈ ಮೊಟ್ಟಮೊದಲ ಸೈದ್ಧಾಂತಿಕ ದೀರ್ಘ ಯುದ್ಧದಲ್ಲಿ ಅಥೆನ್ಸ ನಗರ ರಾಜ್ಯಕ್ಕೆ ಅಪಜಯ ಉಂಟಾಯಿತು. ಪ್ರಜಾಪ್ರಭುತ್ವ ಮೆಚ್ಚುವವರಿಗೆ ದಿಗ್ಭ್ರಾಂತಿಯಾಯಿತು. ಏಕೆಂದರೆ ಸುಮಾರು ೨-೩ ಶತಮಾನಗಳವರೆಗೆ ಅಥೆನ್ಸ ನಗರರಾಜ್ಯ ತನ್ನ ಒಳ್ಳೆಯ ಆಡಳಿತ ಪದ್ಧತಿಯಿಂದ ಬೇರೆ ನಗರ ರಾಜ್ಯಗಳಿಗೆ ಆದರ್ಶಪ್ರಾಯವಾಗಿತ್ತು. ಪೆರಿಕ್ಲಿಸ್ (Pericles) ಎಂಬ ಮಹಾನುಭಾವನು ಅಥೆನ್ಸ ನಗರರಾಜ್ಯದ ಪ್ರಜಾಪ್ರಭುತ್ವ ಪದ್ಧತಿಯನ್ನು ಹಾಗು ನಾಗರಿಕರನ್ನು ಬಹುವಾಗಿ ಪ್ರಶಂಸಿಸಿದ್ದಾನೆ. ಈ ಸೋಲು ಅಥೆನ್ಸ ನಗರರಾಜ್ಯಕ್ಕೆ ಮರಣಾಂತಿಕ ಪೆಟ್ಟು ಕೊಟ್ಟಿತು. ಇನ್ನೂ ಆಶ್ಚರ್ಯವೆಂದರೆ, ಅಥೆನ್ಸ ನಗರ ರಾಜ್ಯದ ಶ್ರೀಮಂತ ಜನರು ಸ್ಪಾರ್ಟಾ ನಗರರಾಜ್ಯವನ್ನು ಬೆಂಬಲಿಸಿದರು. ಇಂಥ ರಾಜಕೀಯ ನಡತೆ ಇಂದು ದೇಶದ್ರೋಹವೆಂದು ಬಗೆಯಲಾಗುತ್ತದೆ. ಆದರೆ ಆಗಿನ ಕಾಲದ ರಾಜಕೀಯ ಹಾಗು ನೈತಿಕ ಮಟ್ಟಗಳು ಬೇರೆಯಾಗಿದ್ದುವು. ಪ್ಲೇಟೋನ ಸಂಬಂಧಿಕರೂ ಸಹ ಇಂಥ 'ದೇಶದ್ರೋಹ'ದಲ್ಲಿ ಭಾಗವಹಿಸಿದ್ದರು. ಸ್ಪಾರ್ಟಾ ನಗರ ರಾಜ್ಯದ ಅರಸನಾದ ಲಿಸಿಸ್ಟ್ರಾಸ್ ಕ್ರಿ.ಪೂ. ೪೦೪ರಲ್ಲಿ ಅಥೆನ್ಸ ನಗರ ರಾಜ್ಯವನ್ನು ಗೆದ್ದಮೇಲೆ ೩೦ ಮುಖಂಡರಿಗೆ ಅಧಿಕಾರ ವಹಿಸಿಕೊಟ್ಟನು. ಈ ಸರಕಾರದ ಅಧಿಕಾರ ಕೇವಲ ಹತ್ತು ತಿಂಗಳು ಮಾತ್ರ ಇತ್ತು.

ಪರಕೀಯ ರಾಜ್ಯದಿಂದ ನೇಮಿಸಿದ ಸರಕಾರವನ್ನು ಕಿತ್ತೊಗೆದು ಪ್ರಜಾಪ್ರಭುತ್ವ ಶಕ್ತಿ ಮತ್ತೆ ತನ್ನ ಅಧಿಕಾರವನ್ನು ಕ್ರಿ.ಪೂ. ೪೦೩ರಲ್ಲಿ ಸ್ಥಾಪಿಸಿತು.

ಈ ಸಂದಿಗ್ಧ ಪ್ರಸಂಗದಲ್ಲಿ ಸಾಕ್ರೆಟೀಸ ತತ್ವಜ್ಞಾನಿಯ ಮೇಲೆ ಅಲ್ಸಿಬಾಯೆಡ್ಸ, ಕ್ರಿಟಿಯಾಸ್, ಚಾರ್ಮಾಯಿಡ್ಸನಂಥ ಯುವಕರನ್ನು ತಪ್ಪು ಬೋಧನೆ ಮಾಡಿದ್ದಕ್ಕಾಗಿ ಹೊಸ ಪ್ರಜಾಪ್ರಭುತ್ವ ಸರಕಾರ ಆರೋಪ ಹೊರಿಸಿ ವಿಚಾರಣೆ ಪ್ರಾರಂಭಿಸಿತು. ಸಾಕ್ರೆಟೀಸ ಯುವಕರಿಗೆ ಇನ್ನು ಬೋಧನೆ ಮಾಡುವುದಿಲ್ಲವೆಂದು ಹೇಳಿ ತನ್ನ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಆದರೆ ಅವನೊಬ್ಬ ಪ್ರಾಜ್ಞ ನಾಗರಿಕ. ವಾಕ್‌ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣದಾನ ಮಾಡಲು ಸಿದ್ಧನಾದ. ಮತ್ತು ವಾಕ್‌ಸ್ವಾತಂತ್ರ್ಯದ ಪ್ರಥಮ ಹುತಾತ್ಮನಾದ. ಈ ದುರ್ಭರ ಘಟನೆ ನಡೆದಾಗ ಪ್ಲೇಟೋನಿಗೆ ೨೮ ವರುಷ. ಪ್ಲೇಟೋ ಆಗಲೇ ೮ ವರುಷದಿಂದ ವಿದ್ಯಾಭ್ಯಾಸ ಮಾಡುತ್ತಿದ್ದನು. ಅಥೆನ್ಸ ನಗರದ ಅಪಭಯ ಹಾಗು ಸಾಕ್ರೆಟೀಸನ ಮರಣ–ಈ ಎರಡೂ ಘಟನೆಗಳು ಪ್ಲೇಟೋನ ಮನಸ್ಸಿನ ಮೇಲೆ ಅಪಾರ ಪರಿಣಾಮ ಬೀರಿದವು. ಬಹುಶಃ ಪ್ಲೇಟೋನ ರಾಷ್ಟ್ರಭಕ್ತಿ ಹಾಗು ಪ್ರಜಾಪ್ರಭುತ್ವ ದ್ವೇಷ ಈ ಘಟನೆಗಳಿಂದ ರೂಪಗೊಂಡಿರಬೇಕು. ಸಾಕ್ರೆಟೀಸನ ಮರಣ ಪ್ಲೇಟೋನನ್ನು ಗ್ರಂಥಕರ್ತನನ್ನಾಗಿ ಮಾಡಿತು. ತನ್ನ ಗುರುವಿನ ನೆನಪಿಗಾಗಿ ಹಾಗು ಆತನ ವಾದದ ಸಮರ್ಥನೆಗಾಗಿ ಪ್ರಥಮ ಗ್ರಂಥ 'ಒಂದು ಕ್ಷಮೆ' (An apology) ಬರೆದನು. ಈ ಗ್ರಂಥ ಆ ಶ್ರೇಷ್ಠ ಸಾಹಿತ್ಯ ಕೃತಿಯೆಂದು ಸಾಹಿತ್ಯ ವಿಮರ್ಶಕರು ಶ್ಲಾಘಿಸಿದ್ದಾರೆ.

ತರುವಾಯ ಪ್ಲೇಟೊ ಹತ್ತು ವರುಷಗಳ ವರೆಗೆ ನಗಾರಾ, ಸೈರಿನ, ಇಜಿಪ್ತ ಹಾಗು ಇಟಲಿಯ ದಕ್ಷಿಣ ಪ್ರದೇಶಗಳ ಪ್ರವಾಸ ಮಾಡಿ ಅನುಭವ ಪಡೆದನು. ಅಥೆನ್ಸ ನಗರಕ್ಕೆ ಮರಳಿ ಬಂದ ಮೇಲೆ 'ಅಕ್ಯಾಡೆಮಿ' ಎಂಬ ವಿದ್ಯಾಲಯ ಕ್ರಿ. ಪೂ. ೩೬೭ರಲ್ಲಿ ಸ್ಥಾಪಿಸಿ ತನ್ನ ಜೀವನಾಂತ್ಯದ ವರೆಗೆ ಅಂದರೆ ೩೪೭ರ ವರೆಗೆ ವಿದ್ಯಾರ್ಥಿಗಳಿಗೆ ಬೋಧಿಸುತ್ತ, ಗ್ರಂಥ ರಚಿಸುತ್ತ ಜೀವನ ಕಳೆದನು.

ಈ ಶ್ರೇಷ್ಠ ತತ್ವಜ್ಞಾನಿ ತನ್ನ ಜೀವನಪರ್ಯಂತ ಸಮಾಜದ ಪುನರುಜ್ಜೀವನ ಹಾಗೂ ರಾಜ್ಯಸೂತ್ರಗಳ ಪುನಃ ಪರಿಶೀಲನೆ ಎಂಬಿವೇ ವಿಚಾರಗಳ ವಿವೇಚನೆಮಾಡಿ ಅನೇಕ ಗ್ರಂಥಗಳನ್ನು ಬರೆದನು. ಪ್ಲೇಟೋ, ಒಬ್ಬ ವೈದ್ಯನಂತೆ ಸಮಾಜದ ಕುಂದು ಕೊರತೆಗಳನ್ನು ಕಂಡುಹಿಡಿದು ಸಮಾಜ ಹಾಗು ರಾಜ್ಯಗಳನ್ನು ಸುಸ್ಥಿತಿಗೆ ತರಲು ಹಲವು ಸಿದ್ಧೌಷಧಿಗಳನ್ನು ಕಂಡುಹಿಡಿದನು. ಅವುಗಳನ್ನು ಅಭ್ಯಸಿಸಲು ಎಷ್ಟು ಆನಂದವೋ ಅಷ್ಟೇ ವಿಚಾರ ಪ್ರಚೋದಕವಾಗಿವೆ. ಆಧುನಿಕತೆ ಅವನ ತತ್ವಗಳ ಜೀವಾಳ. ಅವನ ತತ್ವಗಳು ಎಲ್ಲ ದೇಶ-ಕಾಲಗಳಲ್ಲಿ ವಿಚಾರ ಪ್ರಚೋದಕ ವಾಗಿವೆ.

೩. ಪ್ಲೇಟೋನ ಮೇಲೆ ಸಾಕ್ರೆಟೀಸನ ಪ್ರಭಾವ

ಪ್ಲೇಟೋನ ಗ್ರಂಥಗಳಲ್ಲಿ ಸಾಕ್ರೆಟೀಸನ ಬೋಧನೆಯ ಪ್ರಭಾವ ಕಾಣುತ್ತೇವೆ. ಪ್ಲೇಟೋನಿಗೆ ಸಾಕ್ರೆಟೀಸನೇ ಪ್ರಮುಖ ಚೇತನ ಶಕ್ತಿ.

'ಸದ್ಗುಣವೇ ಜ್ಞಾನ' (Virtue is knowledge) ಎಂಬ ಸಾಕ್ರೆಟೀಸನ ತತ್ವ ಪ್ಲೇಟೋನ ತತ್ವಜ್ಞಾನದ ತಳಹದಿಯಾಗಿದೆ. ಗ್ರೀಕರು ಸದ್ಗುಣ (Virtue) ಎಂಬ ಪದ, ಸ್ವಧರ್ಮದ ಕರ್ತವ್ಯದ ಅರಿವು ಎಂಬ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಜೀವನದಲ್ಲಿ ವೈಜ್ಞಾನಿಕವಾಗಿ ಒಳ್ಳೆಯದನ್ನು ತಿಳಿದುಕೊಳ್ಳುವುದು ಆವಶ್ಯ. ಆ ಒಳ್ಳೆಯ (Good) ದನ್ನು ಕೇವಲ ಕಾಲ್ಪನಿಕವಾಗಿ ಅಥವಾ ಸುದೈವದಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ. ಅದನ್ನು ತಿಳಿದುಕೊಳ್ಳಬೇಕಾದರೆ ವೈಜ್ಞಾನಿಕ ಸಂಶೋಧನೆ ಅಗತ್ಯ. ಒಳ್ಳೆಯದು, ನಿಜವಾದದ್ದು ಮತ್ತು ಮಾನವ ಜೀವನದಲ್ಲಿ ರೂಢಿಸಿಕೊಳ್ಳಲು ಯೋಗ್ಯವಾದುದು. ಜನರಿಗೆ ಏನು ಬೇಕೆಂಬುದು ಅವರ ಒಳ್ಳೆಯುದರ ಬಗ್ಗೆ ಇದ್ದ ಜ್ಞಾನದ ಮೇಲೆ ಅವಲಂಬಿಸಿದೆ. ಕೇವಲ ಜನರು ಬೇಡುವುದೆಲ್ಲ ಒಳ್ಳೆಯುದೆಂದು ಗ್ರಹಿಸುವುದು ತಪ್ಪು. ಆದಕಾರಣ ಯಾರಿಗೆ ಒಳ್ಳೆಯುದರ ಜ್ಞಾನ ಇದೆಯೋ ಅಂದರೆ 'ತತ್ವಜ್ಞಾನ ರಾಜ'ರ ಕೈಯಲ್ಲಿ ಸರಕಾರದ ನಿರ್ಣಯಾತ್ಮಕ ಅಧಿಕಾರವಿರುವುದು ಯೋಗ್ಯ. ಇದೇ ಸದ್ಗುಣವೇ ಜ್ಞಾನ ಎಂಬ ತತ್ವದ ಅರ್ಥ. ಆದರ್ಶರಾಜ್ಯ ಗ್ರಂಥ ಈ ತತ್ವದ ಮೇಲೆ ರಚಿತವಾಗಿದೆ.

ಪ್ಲೇಟೋ ಸಾಕ್ರೆಟೀಸನಿಂದ ಸತ್ಯ ಕಂಡುಹಿಡಿಯಲು ತತ್ವಜ್ಞಾನದ ವಿರೋಧಾಭಾಸ ಪದ್ಧತಿಯನ್ನು (Dialectic Method of Philosophy) ಕಲಿತು ತನ್ನ ತತ್ವಜ್ಞಾನದಲ್ಲಿ ಅಳವಡಿಸಿದನು. ಈ ಪದ್ಧತಿಯ ಪ್ರಕಾರ ಮೊದಲಿದ್ದ ಶಕ್ತಿ (Thesis) ಹೊಸ ಶಕ್ತಿ (Antithesis)ಯ ವಿರುದ್ಧ ಹೋರಾಡಿ ಒಂದು ಸಮನ್ವಯ ಶಕ್ತಿಗೆ (Synthesis) ಜನ್ಮ

ಕೊಡುತ್ತದೆ ಇದಕ್ಕೆ ನಾವು ನಾಗರಿಕ ಪ್ರಗತಿ ಎನ್ನುತ್ತೇವೆ. ಮಾನವ ಇತಿಹಾಸ ಕೇವಲ ಇಂಥ ಹಳೆ-ಹೊಸ ಶಕ್ತಿಗಳ ತಿಕ್ಕಾಟವಾಗಿದೆ. ಹಿಂದಿನ ಮತ್ತು ಇಂದಿನ ವಿಚಾರಗಳು, ಭವಿಷ್ಯತ್ತಿನ ವಿಚಾರಗಳನ್ನು ರೂಪಿಸುತ್ತವೆ. ಈ ಪದ್ಧತಿಯಿಂದ ತತ್ವಜ್ಞಾನದ ಪರಮಾಧಿಕಾರವನ್ನು (Rule of Philosophy) ಪ್ಲೇಟೊ ಸಮರ್ಥಿಸಿದ್ದಾನೆ.

ಸಾಕ್ರೆಟೀಸನ ತತ್ವವಾದ ಆದರ್ಶವೇ ಸತ್ಯವಾದದ್ದು. (The Ideal is the real) ಪ್ಲೇಟೋನನ್ನು ಸದ್ಗುಣ ಎಂಬ ಪದಕ್ಕೆ ನೈತಿಕ ತಳಹದಿಯ ಮೇಲೆ ಪರಬ್ರಹ್ಮ ಸತ್ಯಜ್ಞಾನ (Knowledge of absolute truth) ಎಂಬ ಅರ್ಥ ಕೊಡುವಂತೆ ಮಾಡಿತು. ಸತ್ಯ ಜಗತ್ತು ಕಾಣುವ ಜಗತ್ತಿನ ಹಿಂದೆ ಅಡಗಿದೆ. ಉದಾಹರಣಾರ್ಥವಾಗಿ ಕಣ್ಣಿಗೆ ಕಾಣುವ ಘನರೂಪದಲ್ಲಿರುವ ಮೇಜು ಸತ್ಯವಾದುದಲ್ಲ. ಆದರೆ 'ಮೇಜು' ಎಂಬ ವಿಚಾರ (ಆದರ್ಶ) ಮಾತ್ರ ಸತ್ಯವಾದದ್ದು. ನಿರಂತರವಾದಂತಹ ವಸ್ತು, ವಿಚಾರ (IDEA) ವಾಗಿದೆ. ಈ ವಸ್ತುವಿನ ವಿಚಾರ ಪರಮ ಸತ್ಯವಾಗಿದೆ. ಹೀಗೆ ಎರಡು ಜಗತ್ತುಗಳನ್ನು ಕಾಣುತ್ತೇವೆ. ಒಂದು, ಸತ್ಯ ಜಗತ್ತು (The world of being) ಆದರ್ಶ ಅಥವಾ ಪರಿಪೂರ್ಣ ಜಗತ್ತು, ಎರಡು. ರೂಪ ಜಗತ್ತು (The world of becoming) (ಅಪರಿಪೂರ್ಣ ಜಗತ್ತು).

ಆದರ್ಶವೇ ಸತ್ಯವಾದದ್ದು, ಕಾಣುವ ವಸ್ತುವಲ್ಲ. (The Ideal is the real, not the actual) ಸತ್ಯ

ಜಗತ್ತೇ ನಿಜವಾದುದು. ಏಕೆಂದರೆ ಅದು ವಿಶ್ವಮಾನ್ಯ ಹಾಗು ನಿರಂತರ ತತ್ವಗಳ ಮೇಲೆ ನಿಂತಿದೆ. ರೂಪ ಜಗತ್ತು ಸದಾಕಾಲ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ತುತ್ತಾಗುವುದು. ರೂಪ ಜಗತ್ತು ಅಪರಿಪೂರ್ಣವಾಗಿರುವುದ ರಿಂದ ಅದರಲ್ಲಿಯ ಜ್ಞಾನ ಇಂದ್ರಿಯಗ್ರಹಿತ ಜ್ಞಾನ. ಇಂದ್ರಿಯ ಗ್ರಹಿತ ಜ್ಞಾನ ಅಪರಿಪೂರ್ಣ. ನಂಬಿಕೆಗೆ ಅನರ್ಹವಾದುದು ಮತ್ತು ಅಸಮರ್ಥನೀಯವಾದುದು. ಈ ಕಾರಣಗಳಿಂದಾಗಿ ಅದು ಅಸತ್ಯವಾಗಿದೆ. ಆದಕಾರಣ ರೂಪಜಗತ್ತು ಅಸತ್ಯ ಜಗತ್ತು.

ಪ್ಲೇಟೊ ಸಾಕ್ರೆಟೀಸನ ವಿಚಾರಧಾರೆಯ ಮೇಲೆ 'ಆದರ್ಶ ರಾಜ್ಯ' ಗ್ರಂಥದಲ್ಲಿ ಸತ್ಯ ಜಗತ್ತಿನ ರೂಪರೇಷೆ ಕೊಟ್ಟಿದ್ದಾನೆ. ಸಾಕ್ರೆಟೀಸನ ಬೋಧನೆಯ ಪರಿಣಾಮದಿಂದ ಆದರ್ಶರಾಜ್ಯ ಗ್ರಂಥ ರಚಿತವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಸಾಕ್ರೆಟೀಸ ನಂಥ ತತ್ವಜ್ಞಾನಿಗೆ ಪ್ಲೇಟೋನಂಥ ಮೇಧಾವಿ ವಿದ್ಯಾರ್ಥಿ ದೊರೆತ ಫಲವೇ "ಆದರ್ಶರಾಜ್ಯ".

ಪ್ಲೇಟೋನ ೩೬ ಸಂವಾದ ಗ್ರಂಥಗಳಲ್ಲಿ 'ಆದರ್ಶರಾಜ್ಯ' ಗ್ರಂಥ ಉತ್ಕೃಷ್ಟವಾದುದು. ಗ್ರೀಕರ ತತ್ವಜ್ಞಾನ ಸಾಹಿತ್ಯ ದಲ್ಲಿಯೇ 'ಆದರ್ಶರಾಜ್ಯ' ಗ್ರಂಥಕ್ಕೆ ಪರಿಪೂರ್ಣತೆಯ, ವಿಷಯ ವ್ಯಾಪ್ತಿ, ಅಥವಾ ವಿಶ್ವವ್ಯಾಪಿ ತತ್ವಜ್ಞಾನ ದೃಷ್ಟಿಯಿಂದ ಸರಿಸಮನಾದ ಗ್ರಂಥವಿಲ್ಲ. ಆದರ್ಶರಾಜ್ಯ ಗ್ರಂಥವಲ್ಲಿ ನಮ್ಮ ರಾಜ್ಯಗಳ ಕುಂದು-ಕೊರತೆಗಳನ್ನು ಕಾಣುವುದಿಲ್ಲ. ಏಕೆಂದರೆ ಅದು ಸತ್ಯ ಜಗತ್ತನ್ನು ತೋರಿಸುವ ಗ್ರಂಥ.ಪ್ಲೇಟೋನ ಆದರ್ಶ

ಕೇವಲ ಕಲ್ಪನೆಯ ಕೂಸಲ್ಲ; ಅದು ಸದಾ ತರ್ಕ, ಅನುಭವ, ತುಲನೆ, ವಿಮರ್ಶೆ ಮೇಲಾಗಿ ಸಾಕ್ರೆಟೀಸನ ಜ್ಞಾನ ಬೆಳಕಿನಲ್ಲಿ ರೂಪಗೊಂಡ ಗ್ರಂಥ.

೪. ಅಥೆನ್ಸ ನಗರರಾಜ್ಯದ ಮೇಲೆ 'ಕ್ಷ' ಕಿರಣ

ಪ್ಲೇಟೋನಿಗೆ ಅಥೆನ್ಸ ನಗರದ ರಾಜಕಾರಣದಲ್ಲಿ ಎರಡು ಕಾರಣಗಳಿಂದ ಆಸಕ್ತಿ ಉಂಟಾಯಿತು. ಒಂದು, ಆತನ ಮನೆತನ ರಾಜಕೀಯ ಜವಾಬ್ದಾರಿಗಳನ್ನು ವಹಿಸುತ್ತ ಬಂದಿತ್ತು. ಎರಡು, ಪೆಲೋಪೆನ್ನೇಸಿಯನ್ ಯುದ್ಧದ ನಂತರ ಅಥೆನ್ಸ ನಗರರಾಜ್ಯ ರಾಜಕೀಯವಾಗಿ ಹಾಗೂ ಸಾಮಾಜಿಕ ವಾಗಿ ಛಿದ್ರಗೊಂಡಿತ್ತು ಅದಕ್ಕಾಗಿ ಅಥೆನ್ಸ ನಗರರಾಜ್ಯದ ಪತನದ ಕಾರಣಗಳೇನು ? ಈ ಪ್ರಶ್ನೆಗೆ ಉತ್ತರ ಕಂಡು ಹಿಡಿ ಯಲು, ಅಥೆನ್ಸನಗರ ರಾಜ್ಯದ ಸಮಾಜ ಹಾಗೂ ಪ್ರಜಾ ಪ್ರಭುತ್ವ ಸರಕಾರಗಳ ಮೇಲೆ 'ಕ್ಷ' ಕಿರಣ ಬೀರಿದನು. ಅವನು ಎತ್ತಿ ತೋರಿಸಿದ ನ್ಯೂನತೆಗಳು ಆತನ ವೈಜ್ಞಾನಿಕ ದೃಷ್ಟಿ ಯನ್ನು ಪ್ರಕಟಿಸುತ್ತವೆ. ಒಬ್ಬ ವೈದ್ಯನಂತೆ ಸಮಾಜದ ರೋಗಕ್ಕೆ ಸರಿಯಾದ ಕಾರಣ ಕಂಡು ಹಿಡಿದು ಅದಕ್ಕೆ ತಕ್ಕ ಪರಿಹಾರಗಳನ್ನು 'ಆದರ್ಶ ರಾಜ್ಯ' ಗ್ರಂಥದಲ್ಲಿ ಸೂಚಿಸಿದ್ದಾನೆ.

ಅಥೆನ್ಸ ನಗರರಾಜ್ಯ ಪರ್ಶಿಯಾ ಚಕ್ರವರ್ತಿಯ ದಂಡ ಯಾತ್ರೆಯನ್ನು ಎದುರಿಸಿ, ಸೋಲಿಸಿ ತನ್ನ ಹಾಗೂ ಇತರ

ಗ್ರೀಕ ಪಟ್ಟಣಗಳ ಸ್ವಾತಂತ್ರ್ಯತೆಯನ್ನು ಉಳಿಸಿಕೊಂಡಿತು. ಅಥೆನ್ಸ ನಗರರಾಜ್ಯ ಗ್ರೀಸಿನ ಸಣ್ಣ-ಪುಟ್ಟ ರಾಜ್ಯಗಳ ಮುಂದಾಳುತನವನ್ನು ವಹಿಸಿತ್ತು. ಪೆರಿಕ್ಲಿಸ್‌ನ ನಾಯಕತ್ವ ದಲ್ಲಿ ಅಥೆನ್ಸ ನಗರ ರಾಜ್ಯ ಪ್ರಸಿದ್ಧಿಯ ಶಿಖರಕ್ಕೇರಿತು. ಆದರೆ ಸ್ಪಾರ್ಟಾ ಮತ್ತು ಅಥೆನ್ಸನಗರ ರಾಜ್ಯಗಳ ಯುದ್ಧದಲ್ಲಿ ಅಥೆನ್ಸಗೆ ಪರಾಜಯವಾಯಿತು. ಅದರ ಸ್ವರ್ಣಯುಗ ಮುಗಿದು ಅವನತಿಯ ಕಾಲ ಬಂದಿತು. ಅಂಥ ಸಂದಿಗ್ಧ ಕಾಲ ದಲ್ಲಿ ಇದ್ದ ಪ್ಲೇಟೋನಿಗೆ ಅಥೆನ್ಸ ನಗರ ರಾಜ್ಯದ ಅವನತಿಯ ಕಾರಣ ಕಂಡು ಹಿಡಿಯುವುದು ತೀರ ಆಸಕ್ತಿಯ ವಿಷಯ ವಾಯಿತು. ಆ ವೇಳೆಗೆ ಪ್ರಜಾಪ್ರಭುತ್ವದ ದೋಷಗಳು ಅಥೆನ್ಸದಲ್ಲಿ ಹಾಗೂ ಗ್ರೀಸಿನ ಇತರ ನಗರ ರಾಜ್ಯಗಳಲ್ಲಿ ತಾಂಡವವಾಡುತ್ತಿದ್ದುವು. ಇಂಥ ಪ್ರಸಂಗದಲ್ಲಿ ಸಾಕ್ರೆಟೀಸನ ಪ್ರಾಣದಾನ ಪ್ರಜಾತಂತ್ರದ ವಿರೋಧಿಯನ್ನಾಗಿ ಮಾಡಿತು. ಪ್ರಜಾತಂತ್ರದ ನ್ಯೂನ್ಯತೆಗಳು ಹೇಗೆ ಅರಾಜಕತೆಗೆ ಮತ್ತು ರಾಜ್ಯದ ಅವನತಿಗೆ ಕಾರಣಗಳಾದವೆಂದು ಆಧುನಿಕ ಪ್ರಜಾ ಪ್ರಭುತ್ವವಾದಿಗಳಿಗೆ ಎಚ್ಚರಿಕೆ ಕೊಡುವಂತೆ ತೋರಿಸಿದ್ದಾನೆ.

ಪ್ರಜಾರಾಜ್ಯದ ತಳಹದಿ ಸ್ವಾತಂತ್ರ್ಯ ಪ್ರಜೆಗಳು ತಮ್ಮ ಮನಬಂದಂತೆ ಮಾತಾಡಬಹುದು, ಮಾಡಬಹುದು. ಪ್ಲೇಟೋ ಸ್ವಾತಂತ್ರ್ಯವೆಂದರೆ ಅನಿರ್ಬಂಧಿತ, ಕಡಿವಾಣವಿಲ್ಲದ ಸ್ವಾತಂತ್ರ್ಯ ವೆಂದು ತಿಳಿದು ಈ ರೀತಿ ಹೇಳಿದ್ದಾನೆ. ಈಗಿನ ಪ್ರಜಾಪ್ರಭುತ್ವ ದಲ್ಲಿ ಪ್ರತಿಯೊಬ್ಬ ಪ್ರಜೆಗೆ ಸ್ವಾತಂತ್ರ್ಯಗಳನ್ನು ಸಂವಿಧಾನದ ಮೂಲಕ ಕೊಟ್ಟಿದ್ದರೂ, ಪ್ರತಿಯೊಂದು ಸ್ವಾತಂತ್ರ್ಯದ ಮೇಲೆ ಸಮಾಜದ ಹಿತದ ದೃಷ್ಟಿಯಿಂದ, ರಾಜ್ಯದ ಸುಭದ್ರತೆಯ

ದೃಷ್ಟಿಯಿಂದ ಹಲವು ನಿರ್ಬಂಧಗಳನ್ನು ಹೇರಲಾಗಿದೆ. ಆಗಿನ ಕಾಲದಲ್ಲಿ ಸ್ವಾತಂತ್ರ್ಯದ ದುರುಪಯೋಗವಾಗುವದನ್ನು ಪ್ಲೇಟೊ ಎತ್ತಿ ತೋರಿಸಿದ್ದಾನೆ. ಆಡಳಿತದಲ್ಲಿಯ ಶಿಥಿಲತೆ ಪ್ರಜಾಪ್ರಭುತ್ವಸ್ವಾತಂತ್ರ್ಯದ ಪ್ರಥಮ ದುಷ್ಪರಿಣಾಮ. ರಾಜ್ಯದ ಕಾರ್ಯವನ್ನು ಒಮ್ಮನಸ್ಸಿನಿಂದ ಶಿಸ್ತಿನಿಂದಮಾಡುವುದು ತೊಂದರೆದಾಯಕ ಏಕೆಂದರೆ ದೇಶದ ಏಳ್ಗೆಗೆ ಯಾವ ನಿಶ್ಚಯ ತೆಗೆದುಕೊಂಡರೂ ಸರ್ವಸಮ್ಮತವಾಗಿ ಜನರು ಒಪ್ಪಿಕೊಳ್ಳುವುದಿಲ್ಲ. ಆ ನಿರ್ಣಯಕ್ಕೆ ವಿರೋಧ ಅಭಿಪ್ರಾಯ ರೂಪಗೊಂಡು ಕಾರ್ಯ ವಿಲಂಬವಾಗುತ್ತದೆ. ವಿರೋಧ ಪಕ್ಷಗಳು ಗುಂಪುಗಾರಿಕೆಯಿಂದ ಬಹಿರಂಗವಾಗಿ ವಾದಮಾಡುತ್ತವೆ. ಯುದ್ಧ ಕಾಲದಲ್ಲಿಯೂ ಶಾಂತ ಕಾಲದಲ್ಲಿಯೂ ಇಂಥ ಆಡಳಿತ ತೊಂದರೆಗಳನ್ನು ನಾವು ಪ್ರಜಾಪ್ರಭುತ್ವದಲ್ಲಿ ಕಾಣುತ್ತೇವೆ ಶಾಸನಗಳಿಗೆ ಮನ್ನಣೆ ದೊರೆಯುವದಿಲ್ಲ. ಅಧಿಕಾರ ನಡೆಸುವವರು ನಿರಂಕುಶ ಪ್ರವೃತ್ತಿಯಿಂದ ಅರ್ಹತೆಗಳನ್ನು ನಿರ್ಲಕ್ಷಿಸಿ ತಮಗೆ ಬೇಕಾದವರಿಗೆ ಅಧಿಕಾರ ಸ್ಥಾನಗಳನ್ನು ಕೊಡಮಾಡುವುದನ್ನು ಪ್ರಜಾಪ್ರಭುತ್ವದಲ್ಲಿ ಕಾಣುತ್ತೇವೆ. ಯೋಗ್ಯಸ್ಥಾನಕ್ಕೆ ಯೋಗ್ಯ ಜನರನ್ನು ಆರಿಸದಿದ್ದರೆ ಅಧಿಕಾರದ ದುರುಪಯೋಗಕ್ಕೆ ಆಸ್ಪದ ಮಾಡಿದಂತಾಗುವುದು. ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸದಿದ್ದರೆ ದೇಶಕ್ಕೆ ವಿಪತ್ತು ಸಂಭವಿಸುವುದು ನಿಶ್ಚಯ. ಸರಿಯಾದ ಜನರನ್ನು ರಾಜ್ಯಕಾರ್ಯರಂಗಗಳಲ್ಲಿ ನೇಮಿಸದಿದ್ದರೆ ಸಮಾಜದ ಸ್ಥಿತಿ ಕೆಟ್ಟುಹೋಗುವುದರಲ್ಲಿ ಸಂಶಯವಿಲ್ಲ. ಆದಕಾರಣ ವ್ಯಕ್ತಿ ಸ್ವಾತಂತ್ರ್ಯ ಮಿತಿ ಮೀರಿದರೆ ದೇಶಸ್ವಾತಂತ್ರ್ಯ ನಾಶವಾಗುತ್ತದೆ.

ಪ್ರಜಾಪ್ರಭುತ್ವದಲ್ಲಿ ಶಾಸನ ಪ್ರಭುತ್ವಕ್ಕೆ (Rule of law)ಕುಂದು ಬರುವ ಸಾಧ್ಯತೆಗಳು ಹೆಚ್ಚು. ಶಾಸನೋಲ್ಲಂಘನೆ ಮಾಡಿದ ವ್ಯಕ್ತಿ ಅಥವಾ ಗುಂಪು ಆಡಳಿತ ಪಕ್ಷಕ್ಕೆ ಸೇರಿದ್ದರೆ ಶಿಕ್ಷೆಯ ಭೀತಿಯಿಲ್ಲದೆ ಇರುವರು. ಏಕೆಂದರೆ ಅವರ ಹಿಂದೆ ಬಲವಾದ ಪಕ್ಷ ಅವರ ಹಿತರಕ್ಷಣೆ ಮಾಡುತ್ತಿರುತ್ತದೆ. ಕಾಯ್ದೆಗಳನ್ನು ಆಳುವವರು, ಆಳಲ್ಪಡುವವರು ಪಾಲಿಸುವುದು ಉತ್ತಮರಾಜ್ಯದ ಚಿಹ್ನ. ಹೀಗಿದ್ದೂ ಪ್ರಜಾಪ್ರಭುತ್ವದಲ್ಲಿ ಪಕ್ಷಪದ್ಧತಿಯ ನೆರವಿನಿಂದ ಶಾಸನೋಲ್ಲಂಘನ ಕ್ಷಮಾರ್ಹ ಅಪರಾಧವಾಗುವುದು. ಜನತೆ ಮೂಕದರ್ಶಕರಾಗುತ್ತಾರೆ. ಅಧಿಕಾರದಲ್ಲಿರುವವರು ದುರ್ನಡತೆಯನ್ನು ಖಂಡಿಸುವುದಿಲ್ಲ. ಹೀಗೆಯೇ ಅನೈತಿಕ ಹಾಗೂ ಕಾಯ್ದೆಬಾಹಿರ ನಡತೆಗಳು ಹೆಚ್ಚಾಗುತ್ತ ಹೋಗುತ್ತವೆ. ಸಮಾಜದ ಸ್ವಾಸ್ಥ್ಯ ಇಂಥ ಪರಿಸ್ಥಿತಿಯಲ್ಲಿ ಉಳಿಯಲು ಸಾಧ್ಯವಿಲ್ಲ.

ಜನನಾಯಕರಲ್ಲಿ ಎರಡು ವಿಧ. ಕೆಲ ಜನನಾಯಕರು ತಮಗೆ ದೊರೆತ ರಾಜಕೀಯ ಅಧಿಕಾರಗಳನ್ನು ದೂರದೃಷ್ಟಿಯಿಂದ ಜನಹಿತಕ್ಕಾಗಿ ಉಪಯೋಗಿಸುತ್ತಾರೆ. ಎಷ್ಟೋ ಜನನಾಯಕರು ಸ್ವಾರ್ಥಪರರಿರುವರು. ಇಂಥವರು ಜನರ ವಾದಗಳನ್ನು ಎತ್ತಿ ಹಿಡಿದು ಅಧಿಕಾರ ಸಂಪಾದಿಸುವದಕ್ಕೂ, ಅಧಿಕಾರ ಉಳಿಸುವದಕ್ಕೂ ಸಂಕುಚಿತ ದೃಷ್ಟಿಯಿಂದ ರಾಜಕೀಯ ಅಧಿಕಾರವನ್ನು ಉಪಯೋಗಿಸುತ್ತಾರೆ. ಇಂಥ ಜನನಾಯಕರೇ ದೇಶಕ್ಕೆ ಆಪತ್ತು ತರುವ ಸಂಭವ ಹೆಚ್ಚು. ಪ್ರಜಾಪ್ರಭುತ್ವದಲ್ಲಿ ಉತ್ತಮ ಜನನಾಯಕರು ದೊರೆಯುವುದು ದುರ್ಲಭ.

ಪ್ರಜಾಪ್ರಭುತ್ವದಲ್ಲಿ ಎಲ್ಲ ನಾಗರಿಕರು ಸ್ವತಂತ್ರರು. ಒಬ್ಬನ ಸ್ವಾತಂತ್ರ್ಯ ಇನ್ನೊಬ್ಬನ ಸ್ವಾತಂತ್ರ್ಯವನ್ನು ಅಪಹರಿಸ ಬಾರದು. ಆದ್ದರಿಂದ ಸ್ವಾತಂತ್ರ್ಯದ ಜೊತೆಗೆ ಸಮಾನತೆಗೂ ಅಗ್ರಸ್ಥಾನವಿದೆ. ಪ್ಲೇಟೋ ಸಮಾನತೆಯನ್ನು ವ್ಯಂಗ್ಯವಾಗಿ ಖಂಡಿಸಿದ್ದಾನೆ. ಜನರಲ್ಲಿ ಅಸಮಾನತೆ ಸಂಪತ್ತಿನಲ್ಲಿ, ಗುಣ-ಕ್ರಿಯಾ-ಕೌಶಲಗಳಲ್ಲಿ ಕಂಡುಬರುತ್ತದೆ. ಆದಾಗ್ಯೂ, ಪ್ರಜಾ ಪ್ರಭುತ್ವದಲ್ಲಿ ಎಲ್ಲರೂ ಸಮಾನರೆಂಬ ಕಲ್ಪನೆಗೆ ಪ್ರಾಮುಖ್ಯ ವಿರುತ್ತದೆ. ಅಜ್ಞರೂ, ಜ್ಞಾನಿಗಳೂ ಸಮಾನರೆಂದು ಪರಿಗಣಿ ಸಲ್ಪಟ್ಟು ಅಜ್ಞಾನಿಗಳಿಗೆ ಅಧಿಕಾರ ದೊಡ್ಡಪದವಿಗಳು ದೊರೆ ಯುತ್ತವೆ. ಜ್ಞಾನಿಗೆ ತಕ್ಕ ಸ್ಥಾನಗಳು ದೊರೆಯದೇ ದೇಶವೇ ಕ್ರಿಯಾಶಕ್ತಿಯಿಂದ ವಂಚಿತವಾಗುತ್ತದೆ. ಆದಕಾರಣ ಪ್ರಜಾ ಪ್ರಭುತ್ವವು ದೇಶಕ್ಕೆ ತುಂಬಿಬಾರದ ಹಾನಿಯುಂಟುಮಾಡು ತ್ತದೆ.

ಪ್ರಜಾರಾಜ್ಯದಲ್ಲಿ ಪ್ರಭುತ್ವವು ಯಾವ ವ್ಯಕ್ತಿ-ವಂಶಗಳಿಗೆ ಮೀಸಲಾಗಿರುವುದಿಲ್ಲ. ಯಾರು ಬೇಕಾದರೂ ಪ್ರಭುತ್ವ ವರ್ಗ ವನ್ನು ಸೇರಬಹುದು. ಜನರಲ್ಲಿ ಉತ್ಸಾಹಿಗಳೂ, ಪಕ್ಷ ಗಳನ್ನು ಕಟ್ಟಿಕೊಂಡು ಜನರ ಬಹುಮತ ಗಳಿಸಿ ಪ್ರಭುತ್ವ ವರ್ಗಕ್ಕೆ ಸೇರುತ್ತಾರೆ. ಪ್ರಜಾನಾಯಕರು ಸಭೆಗಳಲ್ಲಿ ಮತ ದಾರರನ್ನು ತಮಗೆ ಬೆಂಬಲಿಸುವಂತೆ ಮಾಡಲು ಉದಾತ್ತ ತತ್ವಗಳನ್ನು ಬೋಧಿಸುವುದಕ್ಕೆ ಬದಲಾಗಿ ಜನರಿಗೆ ತತ್ಕಾಲದಲ್ಲಿ ಪ್ರಿಯವಾದ ಅಭಿಪ್ರಾಯಗಳನ್ನೇ ರಾಷ್ಟ್ರಹಿತಕ್ಕೆ ಸಾಧನಗಳೆಂದು ಸಾರುತ್ತಾರೆ. ಪ್ರಜಾನಾಯಕರು ದೂರದೃಷ್ಟಿಯಿಂದ ಆತ್ಮ ನಿಗ್ರಹದಿಂದ ಹಾಗೂ ರಾಷ್ಟ್ರ ಪ್ರೇಮದಿಂದ ತಮ್ಮ ರಾಜಕೀಯ

ಕರ್ತವ್ಯಗಳನ್ನು ಮಾಡದೇ ಸ್ವಹಿತ, ಚುನಾವಣೆಯಲ್ಲಿ ಜಯ, ಪಕ್ಷದ ಗೆಲುವು, ಇವುಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಾರೆ. ರಾಷ್ಟ್ರಹಿತಕ್ಕಿಂತ ಪಕ್ಷದ ಹಾಗು ವ್ಯಕ್ತಿಗಳ ಸ್ವಹಿತ ಪ್ರಾಮುಖ್ಯ ಪಡೆಯುತ್ತದೆ. ರಾಜ್ಯ, ಒಂದು ಬಲಿಷ್ಠ ಕಾಡುಪ್ರಾಣಿಯಾದರೆ ಪ್ರಜಾನಾಯಕರು ಆ ಕಾಡುಪ್ರಾಣಿಯ ಇಂಗಿತವನ್ನರಿತು ಅದನ್ನು ಸ್ವಾಧೀನಪಡಿಸಿಕೊಂಡು ತಮ್ಮ ಸ್ವಾರ್ಥ ಸಂಪಾದಿಸುವ ಸರ್ಕಸ್ಸಿನ ಸಾಹಸಿಗಳಂತೆ ಇರುತ್ತಾರೆಂದು ಪ್ಲೇಟೊ ಪ್ರಜಾ ರಾಜ್ಯದ ಮುಖಂಡರನ್ನು ಈ ಸಾಮ್ಯದ ಮೂಲಕ ತೀಕ್ಷ್ಣವಾಗಿ ಖಂಡಿಸಿದ್ದಾನೆ. ಇಂಥ ಮುಖಂಡರು ಜನಮತ ಸಂಪಾದನೆ, ಆ ಮೂಲಕ ಅಧಿಕಾರ ಸಂಪಾದನೆ ಮುಖ್ಯ ಗುರಿಯನ್ನಾಗಿ ಮಾಡಿಕೊಂಡಿರುತ್ತಾರೆ. ಕಾವ್ಯದಲ್ಲಿ, ಸಂಗೀತದಲ್ಲಿ, ಆರ್ಥಿಕ ವ್ಯವಸ್ಥೆಯಲ್ಲಿ ಹಾಗೂ ರಾಜಕೀಯ ಆಡಳಿತದಲ್ಲಿ ಜನರ ಅಭಿಪ್ರಾಯಕ್ಕೇ ಹೆಚ್ಚು ಪ್ರಾಶಸ್ತ್ಯ. ತತ್ತ್ವದ ದೃಷ್ಟಿಯಿಂದ ಇಲ್ಲವೇ ರಾಷ್ಟ್ರದ ಹಿತದ ದೃಷ್ಟಿಯಿಂದ ರಾಜ್ಯಾಡಳಿತ ನಡೆಯುವು ದಿಲ್ಲ.

ಪ್ಲೇಟೊ ತಾನಿದ್ದ ಕಾಲದಲ್ಲಿಯ ನೇರ ಪ್ರಜಾಪ್ರಭುತ್ವದ ನ್ಯೂನತೆಗಳನ್ನು ತೋರಿಸಿದ್ದರೂ ಈಗಿನ ಕಾಲದಲ್ಲಿಯ ಪ್ರಜಾ ಪ್ರತಿನಿಧಿ ಪದ್ಧತಿಯಲ್ಲಿಯೂ ಆತನು ಹೇಳಿದ ದೋಷಗಳು ಇಲ್ಲದಿಲ್ಲ. ಅಂತೆಯೇ ಪ್ಲೇಟೋನ ಲೇಖನದಲ್ಲಿ ನಿರಂತರ ಆಧುನಿಕತೆಯನ್ನು ಕಾಣುತ್ತೇವೆ.

ಪ್ಲೇಟೊ ಆಗಿನ ಪ್ರಜಾಪ್ರಭುತ್ವದಲ್ಲಿಯ ಕುಂದುಕೊರತೆ ಗಳನ್ನು ತೋರಿಸುವುದರ ಜೊತೆಗೆ ಆರ್ಥಿಕ ಹಿತಾಸಕ್ತಿಗಳು

ಹೇಗೆ ಗುಂಪುಗಾರಿಕೆಯನ್ನು ಬೆಳೆಸಿ ರಾಜ್ಯದ ಅಶಾಂತಿಗೆ ಕಾರಣ ವಾಗುತ್ತವೆ ಎಂದು ಸ್ಪಷ್ಟಪಡಿಸಿದ್ದಾನೆ. ಅಥೆನ್ಸ ಹಾಗೂ ಸ್ಪಾರ್ಟಾನಗರ ರಾಜ್ಯಗಳು ಪ್ರಜಾಪ್ರಭುತ್ವ ಹಾಗೂ ಶ್ರೀಮಂತ ಪ್ರಭುತ್ವ ರಾಜ್ಯಗಳಾಗಿದ್ದುವು. ಗ್ರೀಸ ಜಗತ್ತಿನಲ್ಲಿಯ ಎಲ್ಲ ಶ್ರೀಮಂತರೂ ಸ್ಪಾರ್ಟಾನಗರ ರಾಜ್ಯಕ್ಕೆ ತಮ್ಮ ವಿಧೇಯತೆ ಯನ್ನು ತೋರಿಸಿದರೆ, ಎಲ್ಲ ಬಡವರೂ ಅಥೆನ್ಸ ನಗರ ರಾಜ್ಯಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸುತ್ತಿದ್ದರು. ಅಥೆನ್ಸ ನಗರದ ಆಲ್ಸಿ ಬಾಯಿಡ್ಸನು ಸ್ಪಾರ್ಟಾ ಹಾಗು ಪರ್ಶಿಯಾ ಸರ್ಕಾರಗಳ ಸಹಾಯ ತಗೆದುಕೊಂಡು ತನ್ನ ರಾಜಕೀಯ ಪ್ರಭಾವ ಹೆಚ್ಚಿಸಿ ಕೊಳ್ಳಲು ಪ್ರಯತ್ನ ಮಾಡಿದ್ದು ಐತಿಹಾಸಿಕ ಉದಾಹರಣೆ ಯಾಗಿದೆ. ಒಂದೇ ನಗರದಲ್ಲಿ ಎರಡು ನಗರಗಳಿವೆಯೆಂದು ಪ್ಲೇಟೋ ಹೇಳುತ್ತಾನೆ; ಒಂದು ಶ್ರೀಮಂತರ ನಗರ, ಇನ್ನೊಂದು ಬಡವರ ನಗರ. ಶ್ರೀಮಂತರು ತಮ್ಮ ಆಸ್ತಿಯ ಸಂರಕ್ಷಣೆ ಹಾಗೂ ತಮ್ಮ ಸಾಲ ವಸೂಲ ಮಾಡಿಕೊಳ್ಳುವುದರ ಬಗ್ಗೆ ಆಸಕ್ತಿ ತೋರಿದರೆ, ಬಡವರು ಶ್ರೀಮಂತರಿಂದ ಹೇಗೆ ಹಣ ಸುಲಿದು ಸೇರಿಸಂತೆ ಖರ್ಚು ಮಾಡಬೇಕೆಂದು ಆಲೋಚಿಸು ತ್ತಾರೆ. ವ್ಯಕ್ತಿಗೆ ಆಸ್ತಿಯ ಹಕ್ಕನ್ನು ಕೊಡಮಾಡಿದ್ದೇ ಇಂಥ ಮನೋವೃತ್ತಿ ಬೆಳೆಯಲು ಕಾರಣ. ಆದಕಾರಣ ಸಮಾಜದಲ್ಲಿ ಹಿಂಸೆ, ಪಕ್ಷ ಹೋರಾಟ ತಡೆಯಬೇಕಾದರೆ ಆಸ್ತಿಯ ಹಕ್ಕನ್ನು ಬೇರು ಸಹಿತ ಕಿತ್ತೊಗೆಯಬೇಕೆಂದು ಪ್ಲೇಟೋ ನಿರ್ಣಯಕ್ಕೆ ಬರುತ್ತಾನೆ.

ಅಥೆನ್ಸ ನಗರದಲ್ಲಿ, ಆಗಿನ ಕಾಲದಲ್ಲಿ ಶಿಕ್ಷಣ ಪದ್ಧತಿ ಯನ್ನು ಸರಿಯಾಗಿ ನಡೆಸಿದ್ದಿಲ್ಲ. ಹಣಕ್ಕಾಗಿ ವಿದ್ಯೆ ಮಾರಲಾಗು

ತ್ತಿತ್ತು. ಶಿಕ್ಷಣ ಪದ್ಧತಿ ನಾಗರಿಕರ ಕೈಯಲ್ಲಿ ಆಟದ ಗೊಂಬೆಯಾಗಿತ್ತು ಮತ್ತು ಅದನ್ನು ವ್ಯಾಪಾರದಂತೆ ನಡೆಸುತ್ತಿದ್ದರು. ಪ್ರತಿಯೊಬ್ಬ ಮಗುವಿಗೆ ಸರಿಯಾದ ಶಿಕ್ಷಣ ಸಿಗುತ್ತಿರಲಿಲ್ಲ, ಕಾಲಕಾಲಕ್ಕೆ ಶಿಕ್ಷಕರು (Itinerary Teachers) ಬಂದು ಹೋಗುತ್ತಿದ್ದರು. ವಿದ್ಯಾರ್ಥಿ-ಶಿಕ್ಷಕರ ನಡುವೆ ಮಧುರ ಸಂಬಂಧ ವಿರಲಿಲ್ಲ. ಇಂಥ ವೇಳೆಯಲ್ಲಿ ಇಪಿಕ್ರೇಟ್ಸ್ ಎಂಬ ಸೈನಿಕ ಸ್ಪಾರ್ಟಾ ಭೂದಳವನ್ನು ಸೋಲಿಸಿ ಸರಿಯಾದ ಸೈನಿಕ ಶಿಕ್ಷಣ ಇದ್ದರೆ ಹೇಗೆ ಎಂಥ ಬಲಿಷ್ಠ ಸೈನ್ಯವನ್ನು ಸೋಲಿಸಬಹುದೆಂದು ತೋರಿಸಿದನು. ಅಂದಿನಿಂದ ಔದ್ಯೋಗಿಕ ಶಿಕ್ಷಣ ಕ್ರಮ (Professional Training) ತಲೆಯೆತ್ತಿತು. ಐಸೋಕ್ರೇಟಿಸನು ಕೇವಲ ಭಾಷಣಕಲೆಯನ್ನು ಕಲಿಸಲು ಒಂದು ವಿದ್ಯಾಲಯ ಸ್ಥಾಪಿಸಿದನು. ಕೇವಲ ಭಾಷಣಕಾರರನ್ನು ಸೈನಿಕರನ್ನು ನಿರ್ಮಿಸುವುದು ಶಿಕ್ಷಣದ ಉದ್ದೇಶವಲ್ಲ. ಜನರಿಗೆ ಏನು ಕಲಿಸಬೇಕು ಮತ್ತು ಯಾವ ಕಾರ್ಯಮಾಡಲು ತರಬೇತಿ ನೀಡಬೇಕು ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕಂಡು ಹಿಡಿಯುವುದೇ ಶಿಕ್ಷಣದ ಉದ್ದೇಶವೆಂದು ಪ್ಲೇಟೊ ಮನಗಂಡನು ಶಿಕ್ಷಣ ತರಬೇತಿಯ ಜೊತೆಗೆ ಸಂಶೋಧನೆಯನ್ನೂ ಕೂಡಿಸುತ್ತಾನೆ. ಅಥೆನ್ಸ್ ನಾಗರಿಕರಿಗೆ ಶಿಕ್ಷಣ ನೀಡಲು 'ಅಕ್ಯಾಡೆಮಿ' ಎಂಬ ವಿದ್ಯಾಲಯ ಸ್ಥಾಪಿಸುತ್ತಾನೆ. ಇದೇ ಮುಂದೆ ೧೦೦೦ ವರುಷಗಳವರೆಗೆ ಯುರೋಪ ಖಂಡಕ್ಕೆ ಗುರುವಾಗಿ ಜ್ಞಾನ ಪ್ರಸಾರದ ಅಮೂಲ್ಯ ಸೇವೆ ಸಲ್ಲಿಸಿತು.

ಪ್ಲೇಟೊ ಪ್ರಜಾರಾಜ್ಯದಲ್ಲಿಯ ಅವಗುಣಗಳನ್ನು ಕಂಡು ಹಿಡಿದಿದ್ದಾನೆ. ಆರ್ಥಿಕ ಹಿತಾಸಕ್ತಿಗಳು ಹೇಗೆ ರಾಜ್ಯಕ್ಕೆ

ಅಶಾಂತಿ ಒದಗಿಸುತ್ತವೆ ಎಂದು ಮನಗಂಡಿದ್ದನು. ಹಾಗೂ ಆಗಿನ ಶಿಕ್ಷಣ ಪದ್ಧತಿಯಲ್ಲಿಯ ಕುಂದುಕೊರತೆಗಳನ್ನು ಅವಲೋಕಿಸಿದ್ದನು. ಮುಖಂಡರ ಸ್ವಾರ್ಥನಡತೆ, ಅಜ್ಞಾನ ಗ್ರೀಕ ನಗರ ರಾಜ್ಯಗಳಲ್ಲಿ ತಾಂಡವವಾಡುತ್ತಿದ್ದವು. ಇವುಗಳಿಗೆಲ್ಲ ತಕ್ಕ ಪರಿಹಾರವೇನು ? ಈ ಪ್ರಶ್ನೆಗೆ ಉತ್ತರವಾಗಿ ಪ್ಲೇಟೊ ಆದರ್ಶ ರಾಜ್ಯ ಗ್ರಂಥವನ್ನು ಬರೆದನು.

೫. ರಾಜ್ಯ ಹಾಗೂ ಸಮಾಜ ಸಿದ್ಧಾಂತಗಳು

ಪ್ಲೇಟೊ ವ್ಯಕ್ತಿ ಹಾಗೂ ರಾಜ್ಯಗಳ ನಡುವೆ ಸಾಮ್ಯ ಕಂಡು ಹಿಡಿದಿದ್ದಾನೆ. ವ್ಯಕ್ತಿಯ ಭವ್ಯರೂಪವೇ ರಾಜ್ಯ. ರಾಜ್ಯ ಅನೇಕ ವ್ಯಕ್ತಿಗಳಿಂದ ಕೂಡಿದ್ದರೂ ಪ್ರತ್ಯೇಕ ವ್ಯಕ್ತಿತ್ವವಿರುತ್ತದೆ. ಮಾನವನ ಉತ್ಕೃಷ್ಟರೂಪವೇ ರಾಜ್ಯ. ರಾಜ್ಯದ ವಿವಿಧ ಸಂಸ್ಥೆಗಳು ವ್ಯಕ್ತಿಗಳ ವಿಚಾರದಿಂದ ಉದ್ಭವವಾಗಿರುತ್ತವೆ ಮತ್ತು ಅವು ಜನರ ನೈತಿಕ ಮಟ್ಟವನ್ನು ಸಾರುತ್ತವೆ. ಅವನು ಎರಡು ಪ್ರಕಾರದ ರಾಜ್ಯ ಸಿದ್ಧಾಂತಗಳನ್ನು ರೂಪಿಸಿದ್ದಾನೆ. ಅವು: ೧. ಮನಶ್ಶಾಸ್ತ್ರದ ರಾಜ್ಯಸಿದ್ಧಾಂತ ೨. ಆರ್ಥಿಕ ರಾಜ್ಯ ಸಿದ್ಧಾಂತ.

ಮನುಷ್ಯನ ಆತ್ಮ ಮೂರು ಅಂಶಗಳಿಂದ ಕೂಡಿದೆ. ೧. ಆಶೆಯಿಂದ ಆವೃತವಾದ ಆತ್ಮ ೨. ಸ್ಫೂರ್ತಿಯಿಂದೊಡಗೂಡಿದ ಆತ್ಮ. ೩. ಜ್ಞಾನ-ಲಾಲಸೆಯಿರುವ ಆತ್ಮ ಈ ಮೇಲಿನ ಅಂಶಗಳಲ್ಲಿ ಒಂದು ಅಂಶ ಕೆಲವರಲ್ಲಿ ಪ್ರಬಲವಾಗಿದ್ದರೆ

ಇನ್ನೊಂದು ಅಂಶ ಇನ್ನು ಕೆಲವರಲ್ಲಿ ಪ್ರಬಲವಾಗಿರುತ್ತದೆ. ಹೀಗೆ ಮನುಷ್ಯರಲ್ಲಿ ಮೂರು ಪ್ರಕಾರದ ಜನರನ್ನು ಕಾಣುತ್ತೇವೆ. ಅವು:

i) ಬಂಗಾರದ ಮನುಷ್ಯರು (Men of Gold)

ii) ಬೆಳ್ಳಿಯ ಮನುಷ್ಯರು (Men of Silver)

iii) ಕಬ್ಬಿಣ ಮನುಷ್ಯರು (Men of Iron)

ಅಂದರೆ ಸಾತ್ವಿಕ, ರಾಜಸ, ತಾಮಸ ಗುಣದ ಮೂರು ಪ್ರಕಾರದ ಜನರನ್ನು ಕಾಣಬಹುದು.

ಇದೇ ರೀತಿ ರಾಜ್ಯದಲ್ಲಿ ಮೂರು ಅಂಶಗಳನ್ನು ಗಮನಿಸಬಹುದು.

೧. ಆರ್ಥಿಕ ಅಂಶ ಅಂದರೆ ಕಾರ್ಮಿಕರು, ಕುಶಲಕರ್ಮಿಗಳು ಮುಂತಾದವರು.

೨. ವೀರತ್ವದ ಅಂಶ ಅಂದರೆ ಸೈನಿಕ ವರ್ಗ;

೩. ತತ್ವಜ್ಞಾನದ ಅಂಶ ಅಂದರೆ ಆಳುವ ವರ್ಗ.

ಮನಶ್ಶಾಸ್ತ್ರದ ರಾಜ್ಯಸಿದ್ಧಾಂತ ವ್ಯಕ್ತಿಗೂ ಹಾಗೂ ರಾಜ್ಯಕ್ಕೂ ಇರುವ ನಿಕಟ ಸಂಬಂಧವನ್ನು ಪ್ಲೇಟೋ ಸ್ಪಷ್ಟಪಡಿಸಿದ್ದಾನೆ.

ಆರ್ಥಿಕ ರಾಜ್ಯಸಿದ್ಧಾಂತದಲ್ಲಿ ಅವನು ಸಮಾಜದ, ರಾಜ್ಯದ ಉದಯವನ್ನು ವಿವರಿಸುತ್ತಾನೆ. ಸಮಾಜದಲ್ಲಿಯ

ವ್ಯಕ್ತಿಗಳ ಬೇಡಿಕೆಗಳು ಅನೇಕ. ತಾನೇ ಸ್ವತಃ ಆ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅಂಥ ಸಾಮರ್ಥ್ಯ ಯಾವ ವ್ಯಕ್ತಿಗೂ ಇರಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಆಹಾರ, ಅರಿವೆ ಮತ್ತು ವಸತಿ ಆವಶ್ಯ. ಎಲ್ಲವನ್ನೂ ತಾನೇ ಪೂರೈಸಿಕೊಳ್ಳುವದು ವ್ಯಕ್ತಿಗೆ ಸಾಧ್ಯವಿಲ್ಲ. ಈ ಕನಿಷ್ಟ ಆವಶ್ಯ ಕತೆಗಳನ್ನು ಈಡೇರಿಸಿಕೊಳ್ಳಲು ವ್ಯಕ್ತಿಗಳ ನಡುವೆ ಪರಸ್ಪರ ಸಹಕಾರ ಬೆಳೆಯುತ್ತದೆ. ಈ ಸಹಕಾರ ತತ್ತ್ವದ ಮೇಲೆಯೇ ಸಮಾಜ ರಚನೆಯಾಗುತ್ತದೆ.

ಸಮಾಜವೆಂದರೆ ಸೇವೆಗಳ ಪದ್ಧತಿ. ಇಂಥ ಸೇವಾ ಪದ್ಧತಿ ಯಲ್ಲಿ ಪ್ರತಿಯೊಬ್ಬ ಸದಸ್ಯ ತನಗೆ ಸಾಧ್ಯವಿದ್ದಷ್ಟು ಕೊಡುತ್ತಾನೆ; ಮತ್ತು ತನಗೆ ಆವಶ್ಯವಿದ್ದಷ್ಟು ಕೊಡುತ್ತಾನೆ. ಪ್ರತಿಯೊಬ್ಬ ಸಮಾಜ ಜೀವಿ ಪರಸ್ಪರ ಸಹಾಯಕಾರಿಯಿರುತ್ತಾನೆ. ಹಾಗು ತನ್ನ ಇಷ್ಟಗಳನ್ನು ಈಡೇರಿಸಿಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಸಮಾಜದಲ್ಲಿಯ ಸ್ಥಾನ ಆತನ ಕರ್ತವ್ಯದ ಮಹತ್ವದ ಮೇಲಿರುತ್ತದೆ. ಅರಿಸ್ಟಾಟಲ್, ತನ್ನ ಗುರುವಾದ ಪ್ಲೇಟೋನ ಇತರ ಸಿದ್ಧಾಂತಗಳನ್ನು ಖಂಡಿಸಿದರೂ ಈ ಸಮಾಜ ಸಿದ್ಧಾಂತ ವನ್ನು ಎತ್ತಿಹಿಡಿದ್ದಾನೆ. ಪ್ಲೇಟೋನ ಈ ಸಮಾಜ ಸಿದ್ಧಾಂತ ಸಮಾಜಶಾಸ್ತ್ರದ ಉದಯ ಮತ್ತು ಬೆಳವಣಿಗೆಗೆ ಕಾರಣ ವಾಗಿದೆ.

ವ್ಯಕ್ತಿಗಳ ಸರಕು-ಸೇವೆಗಳ (Goods and Services) ವಿನಿಮಯ (Exchange) ಬೇರೆ ಎರಡು ತತ್ತ್ವಗಳಿಗೆ ಎಡೆ ಮಾಡಿಕೊಡುತ್ತದೆ. ಒಂದು, ಶ್ರಮ ಹಂಚಿಕೆ (Division of

Labour) ಎರಡು, ಕಾರ್ಯಕೌಶಲ್ಯ (Specialization of functions). ಮೊದಲೇ ಹೇಳಿದಂತೆ ಸಮಾಜದ ಆವಶ್ಯಕತೆಗಳನ್ನು ಏಕಾಕಿಯಾಗಿ ಪೂರೈಸಲು ಸಾಧ್ಯವಿಲ್ಲ. ಬೇರೆ ಬೇರೆ ಆವಶ್ಯಕತೆಗಳನ್ನು ಬೇರೆ ಬೇರೆ ಜನರು ಪೂರೈಸಬೇಕಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಗೆ ತನ್ನದೇ ಆದ ಸಾಮರ್ಥ್ಯವನ್ನು ಒಂದು ಕಾರ್ಯದಲ್ಲಿ ಮಾತ್ರ ತೋರಿಸಲು ಸಾಧ್ಯ. ಹೀಗೆ ಸಮಾಜದಲ್ಲಿ ಶ್ರಮ ಹಂಚಿಕೆಯಾಗುತ್ತದೆ. ಈ ಶ್ರಮ ಹಂಚಿಕೆ ಕಾರ್ಯಕೌಶಲ್ಯಕ್ಕೆ ಆಸ್ಪದ ನೀಡುತ್ತದೆ. ಒಬ್ಬ ವ್ಯಕ್ತಿ ಒಂದೇ ಉದ್ಯೋಗವನ್ನು ಬಹಳ ದಿನ ಮಾಡುತ್ತ ಹೋದರೆ ಅದರಲ್ಲಿ ಆತನು ಕೌಶಲ್ಯ ಪಡೆಯುತ್ತಾನೆ. ಅವನಂತೆ ಬೇರೆಯವರಿಗೆ ಆ ಉದ್ಯೋಗ ಮಾಡಲು ಸಾಧ್ಯವಾಗದು. ಇದು ಮಾನವನ ಉದ್ಯೋಗಗಳಲ್ಲಿ ಕಂಡುಬರುವ ಸತ್ಯ.

ಸರಕು-ಸೇವೆಗಳ ವಿನಿಮಯ ಸರಿಯಾಗಿ ನಡೆಯುವಂತೆ ನೋಡುವುದು, ರಾಜ್ಯ ಹಿತಕ್ಕೆ ತಕ್ಕಂತೆ ಶ್ರಮ ಹಂಚಿಕೆ ಮಾಡುವುದು ಮತ್ತು ಪ್ರತಿಯೊಬ್ಬ ವ್ಯಕ್ತಿ ತನ್ನ ಕಾರ್ಯ-ಕೌಶಲ್ಯ ಪ್ರದರ್ಶಿಸಲು ಅವಕಾಶ ಮಾಡಿಕೊಡುವುದು ರಾಜ್ಯದ ಕರ್ತವ್ಯವಾಗಿದೆ.

ಆರ್ಥಿಕ ರಾಜ್ಯಸಿದ್ಧಾಂತ ಸಮಾಜದ ಉಗಮವನ್ನು ವಿವರಿಸುವದಲ್ಲದೆ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಮನಸ್ಸಿಗೆ ಸರಿದೋರಿದ ಉದ್ಯೋಗ ಮಾಡುವುದನ್ನು ಸ್ಪಷ್ಟಪಡಿಸುತ್ತದೆ. ಈ ಸಿದ್ಧಾಂತಕ್ಕೆ ಮನಶ್ಶಾಸ್ತ್ರದ ರಾಜ್ಯಸಿದ್ಧಾಂತ ಪೂರಕವಾಗಿದೆ. ಪ್ರತಿಯೊಬ್ಬ ಮನುಷ್ಯ ತನ್ನ ಮನಸ್ಸಿಗೆ ಬರುವ

ಉದ್ಯೋಗವನ್ನೇ ಮಾಡುತ್ತಾನೆ. ಉದ್ಯೋಗಕ್ಕೂ ಮನಸ್ಸಿಗೂ ಅನ್ಯೋನ್ಯ ಸಂಬಂಧವಿದೆ. ಈ ತತ್ತ್ವವನ್ನು ಅನ್ವಯಿಸಿ ಸಮಾಜದಲ್ಲಿ ಮೂರು ಪ್ರಕಾರದ ಜನರು ಇರುವರೆಂಬುದನ್ನು ವಿವರಿಸಿದ್ದಾನೆ. ಮನಶ್ಶಾಸ್ತ್ರ ರಾಜ್ಯಸಿದ್ಧಾಂತದಲ್ಲಿ ಹೇಳಿರುವಂತೆ ಆಶೆಗಳಿಗೊಳಪಟ್ಟ ಜನರು, ವೀರತ್ವ ಪ್ರಕಟಿಸುವ ಜನರು ಮತ್ತು ಜ್ಞಾನದಾಹದಿಂದ ತುಂಬಿದ ಜನರು. ಆಯಾ ಜನರು ಅವರ ಅಂತಃಪ್ರೇರಣೆಯ ಪ್ರಕಾರ ರಾಜ್ಯದಲ್ಲಿ ಉದ್ಯೋಗಗಳನ್ನು ಒದಗಿಸಿದರೆ ಮಾನವ ಶಕ್ತಿಯು ಪೂರ್ಣ ಉಪಯೋಗವಾಗುತ್ತದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿ ತನ್ನ ಕಾರ್ಯದಲ್ಲಿ ಉತ್ಕೃಷ್ಟತೆ (**Excellance**) ಯನ್ನು ತೋರಿಸುತ್ತಾನೆ. ಇದರಿಂದ ರಾಜ್ಯ ಸ್ವಾವಲಂಬಿಯಾಗಿ ಹೆಚ್ಚು ಸಾಮರ್ಥ್ಯ ಪಡೆಯುತ್ತದೆ.

ಈ ರಾಜ್ಯ ಹಾಗೂ ಸಮಾಜ ಸಿದ್ಧಾಂತಗಳು ಪ್ಲೇಟೋನ ಆದರ್ಶ ರಾಜ್ಯದ ಅಡಿಗಲ್ಲಾಗಿವೆ. ಅವನ ಆದರ್ಶರಾಜ್ಯ ಮೊದಲು ಆದರ್ಶಸಮಾಜ ನಿರ್ಮಾಣದ ಕಡೆಗೆ ಗಮನ ಕೊಡುತ್ತದೆ. ಈ ಆದರ್ಶರಾಜ್ಯದಲ್ಲಿ ಸಮಾಜವನ್ನು ಪ್ರತಿಯೊಬ್ಬ ನಾಗರಿಕನ ಒಳ್ಳೆಯದನ್ನೇ ಬಯಸುವ ರೀತಿಯಲ್ಲಿ ರಚಿಸಲಾಗಿದೆ.

ಆಶೆಯಿಂದ ತುಂಬಿದ ಆತ್ಮಗಳು ಆರ್ಥಿಕ ಕರ್ತವ್ಯವನ್ನು ಮಾಡುವಂತೆ, ವೀರತ್ವದಿಂದ ತುಂಬಿದ ಆತ್ಮಗಳು ದೇಶರಕ್ಷಣೆ ಕಾರ್ಯನಿರ್ವಹಿಸುವಂತೆ, ಮತ್ತು ತತ್ತ್ವಜ್ಞಾನ ದೃಷ್ಟಿ ಬೆಳೆಸಿದ ಆತ್ಮಗಳು ರಾಜ್ಯವಾಳುವ ಕರ್ತವ್ಯವನ್ನು ಒಪ್ಪಿಸುವುದು ಸಹಜ ನ್ಯಾಯಧರ್ಮವಾಗಿದೆ. ಹೀಗೆ ವ್ಯಕ್ತಿಗಳ ಮನಸ್ಸಿಗೆ ತಕ್ಕಂತೆ ರಾಜ್ಯದ ಉದ್ಯೋಗ ಹಂಚಿಕೆ ಮಾಡುವದರಿಂದ ರಾಜ್ಯದ ಅಂತಃಶಕ್ತಿ ಮುಮ್ಮಡಿಯಾಗಿ ಬೆಳೆಯುತ್ತದೆ ಮತ್ತು ಯಾವ ರೀತಿಯ

ಅಸಂತೋಷಕ್ಕೂ ಎಡೆಯಿರುವದಿಲ್ಲ. ಹೀಗೆ ಪ್ಲೇಟೊ ತನ್ನ ಆದರ್ಶರಾಜ್ಯದಲ್ಲಿ ವ್ಯಕ್ತಿ ಸಮಾಜ ಹಾಗೂ ರಾಜ್ಯಕ್ಕೆ ಯೋಗ್ಯ ಸಂಬಂಧ ಕಲ್ಪಿಸಿದ್ದಾನೆ.

ಪ್ಲೇಟೊ ಮೇಲೆ ವಿವರಿಸಿ ಸಾತ್ವಿಕ, ರಾಜಸಿಕ, ತಾಮಸಿಕ ಪ್ರವೃತ್ತಿಯ ಮೇಲೆ ಒಪ್ಪಿಸಿದ ಉದ್ಯೋಗ ವ್ಯವಸ್ಥೆಯಲ್ಲಿ ಏರು-ಪೇರಾದರೆ ರಾಜ್ಯಕ್ಕೆ ಹಾನಿ ತಪ್ಪದು. ಇದೇ ಪ್ಲೇಟೊ ಕಂಡ ಸತ್ಯ. ತಾಮಸಿಕ ಪ್ರವೃತ್ತಿಯವರು ರಾಜ್ಯ ಆಳುವಂತಾದರೆ ರಾಜ್ಯಕ್ಕೆ ಯೋಗ್ಯ ಮಾರ್ಗದರ್ಶನ ಸಿಗಲಾರದು. ರಾಜಸಿಕ ಪ್ರವೃತ್ತಿಯುಳ್ಳವರು ರಾಜ್ಯ ಆಳಿದರೆ ಅವರ ಜ್ಞಾನದ ಕೊರತೆಯಿಂದ ರಾಜ್ಯಕ್ಕೆ ಹಾನಿಯಾಗುತ್ತದೆ. ಕಾರಣ ತತ್ತ್ವಜ್ಞಾನಿಗಳೇ ರಾಜ್ಯವನ್ನಾಳುವ ಹಕ್ಕನ್ನು ಹೊಂದಿರುತ್ತಾರೆ. ಅದು ಅವರ ಕರ್ತವ್ಯವಾಗಿದೆ. ಏಕೆಂದರೆ ತತ್ತ್ವಜ್ಞಾನಿಗಳು ರಾಜ್ಯದ ಮತ್ತು ಸಮಾಜದ ಒಳ್ಳೆಯದನ್ನು (Good) ಬೇರೆಯವರಿಗಿಂತ ಚೆನ್ನಾಗಿ ಅರಿತುಕೊಂಡಿರುತ್ತಾರೆ.

ಹೀಗೆ 'ಆದರ್ಶರಾಜ್ಯ'ದ ಆಡಳಿತ, ರಕ್ಷಣೆ ಮತ್ತು ಅರ್ಥವ್ಯವಸ್ಥೆ ದೂರದೃಷ್ಟಿಯಿಂದ ಪ್ಲೇಟೊ ಅಸಾಮಾನ್ಯ ರೀತಿಯಲ್ಲಿ ಸರ್ವರೂ ಸರ್ವಕಾಲದಲ್ಲಿ ಒಪ್ಪುವಂತೆ ರಚಿಸಿದ್ದಾನೆ. ಅವನ ರಾಜ್ಯ ಹಾಗು ಸಮಾಜ ಸಿದ್ಧಾಂತಗಳು ಕ್ರಾಂತಿಕಾರಕ ಹಾಗು ವಿಚಾರಪ್ರಚೋದಕವಾಗಿವೆ.

೬. ತತ್ತ್ವಜ್ಞಾನಿ ಅರಸರು

'ಕರ್ತವ್ಯದ ಉತ್ಕೃಷ್ಟತೆಯೇ ಜ್ಞಾನ' (Virtue is knowledge) ಎಂಬ ಸಾಕ್ರೆಟೀಸನ ತತ್ತ್ವ ಪ್ಲೇಟೋನ ಆದರ್ಶ ರಾಜ್ಯದ ಅಡಿಗಲ್ಲು. ಈ ತತ್ತ್ವವೇ ಪ್ಲೇಟೋನನ್ನು ರಾಜ್ಯಕ್ಕೆ

ಒಳ್ಳೆಯದಾಗುವುದು ಹೇಗೆ? ಎಂದು ವಿಚಾರ ಮಾಡಹಚ್ಚಿತು. ಒಳ್ಳೆಯದನ್ನು (Good) ಅರಿತುಕೊಳ್ಳಬಹುದು. ಮತ್ತು ಬೇರೆಯವರಿಗೆ ಕಲಿಸಬಹುದು. ಸರಕಾರದ ಆಡಳಿತ ಜ್ಞಾನ, ಜನರ ಸುಖ-ಶಾಂತಿಯ ಬಗ್ಗೆ ಚಿಂತನ ಮತ್ತು ದೂರದೃಷ್ಟಿ ವಿವೇಕ ಹೊಂದಿದ ನಾಯಕರೇ ರಾಜ್ಯದ ಏಳಿಗೆಗೆ ಅತ್ಯವಶ್ಯ. ಗ್ರೀಕ ಜಗತ್ತಿನಲ್ಲಿ ತಾನು ಕಂಡ ಅನಾಯಕತ್ವದ ಬಗ್ಗೆ ವಿಚಾರ ಮಾಡಿ ಅಧಿಕಾರಕ್ಕೆ ಬರಲು ಯಾವ ಅರ್ಹತೆಯಿರಬೇಕು ಎಂದು ವಿಚಾರಿಸಿದನು. ಕೇವಲ ವಂಶದ ಆಧಾರದ ಮೇಲೆ ಇಲ್ಲವೆ ಶ್ರೀಮಂತಿಕೆಯ ಆಧಾರದ ಮೇಲೆ ಅಧಿಕಾರಕ್ಕೆ ಬಂದು ರಾಜ್ಯ ನಡೆಸುವವರು ರಾಜ್ಯ ಹಿತಕ್ಕಿಂತ ಸ್ವಹಿತ ನೋಡಿದ ಎಷ್ಟೋ ಉದಾಹರಣೆಗಳಿವೆ. ಅರಸೊತ್ತಿಗೆ, ಶ್ರೀಮಂತರ ಆಳ್ವಿಕೆಗಳನ್ನು ತಪ್ಪಿಸಿ ಪ್ರಜಾರಾಜ್ಯ ರಚಿಸಿದರೆ ಸಾಮಾನ್ಯ ಜನರ ವಿಶ್ವಾಸವನ್ನು ಮೋಸದಿಂದ ಸಂಪಾದಿಸಿ ಅಧಿಕಾರ ಸ್ಥಾನಕ್ಕೆ ಅನರ್ಹ ವ್ಯಕ್ತಿಗಳು ಬರಹತ್ತಿದರು. ಇಂಥವರು ರಾಜ್ಯಭಾರವನ್ನು ಸಮರ್ಪಕ ರೀತಿಯಲ್ಲಿ ನಡೆಸಲಾರರು. ಏಕೆಂದರೆ ಪ್ರಜಾರಾಜ್ಯದ ನಾಯಕರು ಜ್ಞಾನದಿಂದ ಮತ್ತು ಗುಣದಿಂದ ರಾಜ್ಯಭಾರ ನಡೆಸುವಷ್ಟು ಯೋಗ್ಯತೆವುಳ್ಳವರಾಗಿರುವುದಿಲ್ಲ. ಆದುದರಿಂದ ಯಾರು ರಾಜ್ಯಭಾರ ನಡೆಸಬೇಕು? ಇದೊಂದು ಚಿರಂತನ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ರೂಪವಾಗಿ ತತ್ತ್ವಜ್ಞಾನಿ ಅರಸರು ಎಂಬ ಸಿದ್ಧಾಂತವನ್ನು ಪ್ಲೇಟೋ ಆದರ್ಶ ರಾಜ್ಯದಲ್ಲಿ ನಿರೂಪಿಸಿದ್ದಾನೆ. ಆದರ್ಶರಾಜ್ಯ ಆದರ್ಶ ಜನರಿಂದ ಆಳಲ್ಪಡಬೇಕು. ಇದು ನ್ಯಾಯವಾದ ಬೇಡಿಕೆ. ಪ್ಲೇಟೋನ ಈ ಸಿದ್ಧಾಂತ ಜಗನ್ಮಾನ್ಯ ಸಿದ್ಧಾಂತ. ರಾಜ್ಯ ಅಧಿಕಾರ ನಡೆಯಿಸುವವರು ಈ ಸಿದ್ಧಾಂತದ ಮರ್ಮವನ್ನು ತಿಳಿಯುವುದು ಆವಶ್ಯ.

ಒಂದು ಸಾಮ್ರಾಜ್ಯದಲ್ಲಿ ಜನರು ಕುದುರೆಯಂತಿರುತ್ತಾರೆ ಎಂದು ಪ್ಲೇಟೋ ಹೇಳಿದ್ದಾನೆ. ಸವಾರರು ಬೇರೆಯಾದಾಗ ಆ ಸಂದಿಗ್ಧ ಕಾಲಕ್ಕೆ ನಾವು ಕ್ರಾಂತಿ ಅಥವಾ ವಿಪ್ಲವದ ಕಾಲ ಎಂದು ಹೇಳುತ್ತೇವೆ. ಹೀಗೆ ರಾಜ್ಯ ಇಂಥ ಅನೇಕ ವಿಪ್ಲವ, ಕ್ರಾಂತಿಗಳಿಗೆ ಈಡಾದರೆ ಅಧೋಗತಿಗೆ ಹೋಗುವುದು. ಇದನ್ನು ತಡೆಯಬೇಕಾದರೆ ಜನರು ರಾಜ್ಯಾಂಗ ವಿಚಾರವನ್ನು ಶಾಸ್ತ್ರ ರೀತಿಯಲ್ಲಿ ವಿಚಾರಿಸಿ ಜಾಗೃತರಾಗಿದ್ದು ಸೂತ್ರಕಾರರನ್ನು ನೇಮಿಸಿಕೊಳ್ಳುವುದು ವಿಹಿತ. ಇಂಥ ಯೋಗ್ಯ ಸೂತ್ರಕಾರರಲ್ಲಿ ವಿಜ್ಞಾನ ಶಾಸ್ತ್ರದ ಅರಿವು ಮತ್ತು ತತ್ವಜ್ಞಾನದ ತಿಳಿವಳಿಕೆ ಇರಬೇಕು. ಅಧಿಕಾರ ಅಪೇಕ್ಷಿಸುವವರು ಅದಕ್ಕೆ ತಕ್ಕ ಅರ್ಹತೆಯನ್ನು ಮೊದಲು ಸಂಪಾದಿಸಬೇಕು. ಇಂಥ ಅರ್ಹತೆ ಎರಡು ವಿಧದಿಂದ ಸಾಧ್ಯ. ಒಂದು, ಬುದ್ಧಿ ಸಂಸ್ಕಾರ- ಇದು ಕಾವ್ಯ, ಕಲೆ ಸಂಸ್ಕಾರಗಳಿಂದ ಲಭಿಸುತ್ತದೆ. ಎರಡು, ಭಾವನಾ ಸಂಸ್ಕಾರ- ಇದು ರಾಷ್ಟ್ರಪ್ರೇಮ, ಶೀಲ, ವಿವೇಕ, ಧೈರ್ಯ, ವಿಷಯಾಸಕ್ತಿಯಲ್ಲಿ ಮಿತಿ, ಜ್ಞಾನ, ಧರ್ಮಬುದ್ಧಿ ಇವುಗಳಿಂದ ದೊರೆಯುತ್ತದೆ. ಕೇವಲ ವಿಜ್ಞಾನಶಾಸ್ತ್ರದ ಅರಿವು ಸಾಲದು. ಇದರ ಜೊತೆಗೆ ತತ್ವಜ್ಞಾನದ ಅರಿವು ಬೇಕು. ತತ್ವಜ್ಞಾನಿಯು ಅನೇಕತ್ವದಲ್ಲಿ ಏಕತ್ವವನ್ನು ಕಾಣುತ್ತಾನೆ. ತತ್ತ್ವಜ್ಞಾನಿಗೆ ಪರಮ ಸತ್ (Idea of the Good) ತಿಳಿದಿರುತ್ತದೆ. ತತ್ತ್ವಜ್ಞಾನಿ ಅರಸನಿದ್ದರೆ ರಾಷ್ಟ್ರಹಿತ ಮತ್ತು ಪ್ರಜೆಗಳಲ್ಲಿ ಐಕ್ಯ ಭಾವನೆ, ಸಾಮರಸ್ಯ ಜೀವನ ಹಾಗೂ ಅನುರಾಗ ಬೆಳೆಸಲು ಸಾಧ್ಯವಾಗುವುದು.

ಪ್ಲೇಟೊ ಒಂದು ಸಾಮ್ರಾಜ್ಯದಲ್ಲಿ ಎಂಥವನಿರುತ್ತಾನೆ ಎಂದು ವಿವರಿಸಿದ್ದಾನೆ. ಜನರೆಲ್ಲಾ ಒಂದು ಗುಹೆಯಲ್ಲಿ ಕುಳಿತು ಅದರಲ್ಲಿಯ ನೆರಳನ್ನೇ ನಿಜಜೀವನವೆಂದು ತಿಳಿದಿರುತ್ತಾರೆ. ಆ ಗುಹೆಯಿಂದ ಒಬ್ಬ ವ್ಯಕ್ತಿ ಹೊರಗೆ ಬಂದು ಪ್ರಪಂಚದ ನಿಜಸ್ವರೂಪವನ್ನು ಬೆಳಕಿನಲ್ಲಿ ತಿಳಿದುಕೊಳ್ಳುತ್ತಾನೆ. ಆ ವ್ಯಕ್ತಿಗೆ ಜ್ಞಾನೋದಯವಾಗಿ, ಆತನು ತಾನು ಕಂಡ ಬೆಳಕಿನಲ್ಲಿ ಪ್ರಪಂಚದ ಅಜ್ಞಾನವನ್ನು ಕಂಡು ಆಶ್ಚರ್ಯಪಡುತ್ತಾನೆ. ಗುಹೆಯಲ್ಲಿ ಅಜ್ಞಾನದಲ್ಲಿ ಮುಳುಗಿರುವ ತನ್ನ ಸಹವಾಸಿಗಳನ್ನು ಹೊರಗೆ ಕರೆದುಕೊಂಡು ಬಂದು ತತ್ತ್ವಪ್ರಕಾಶವಾಗುವಂತೆ ಪ್ರಯತ್ನಿಸುತ್ತಾನೆ. ಅಂದರೆ ತತ್ತ್ವಜ್ಞಾನಿ ಗುಹಾವಾಸಿಗಳಿಗೆ ಬೆಳಕಿನಮಾರ್ಗ ತೋರಿಸುತ್ತಾನೆ. ತತ್ತ್ವಜ್ಞಾನಿ ತಾನೊಬ್ಬನೇ ಜ್ಞಾನ ಪಡೆದು ಸನ್ಯಾಸಿಯಾಗಿ ಸಮಾಜದಿಂದ ದೂರವಿರುವುದು ರಾಜ್ಯಕ್ಕೆ ಒಳ್ಳೆಯದಲ್ಲ. ತತ್ತ್ವಜ್ಞಾನಿ ರಾಜ್ಯಭಾರ ನಡೆಸಿ ತತ್ತ್ವದೃಷ್ಟಿಯಿಂದ ಜನರಲ್ಲಿ ಒಕ್ಕಟ್ಟನ್ನು ಬೆಳೆಸಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿ ಸರ್ವರ ಏಳಿಗೆಗಾಗಿ ತನ್ನ ಜೀವನವನ್ನೇ ಮುಡುಪಾಗಿಡುತ್ತಾನೆ. ಜನರೂ ಸಹ ತತ್ತ್ವಜ್ಞಾನಿಗೇ ರಾಜ್ಯಾಧಿಕಾರ ವಹಿಸಿಕೊಟ್ಟು ಆತನ ಆಳ್ವಿಕೆಗೆ ತಮ್ಮ ಸಂಪೂರ್ಣ ಸಹಕಾರ ಸಲ್ಲಿಸಬೇಕು. ಅಂದರೆ ರಾಜ್ಯದಲ್ಲಿ ತತ್ತ್ವ, ಧರ್ಮ, ಮತ್ತು ಉದಾತ್ತ ಜೀವನಗಳಿಗೆ ಮಹತ್ವ ದೊರೆಯುತ್ತದೆ.

ಬಡಿಗ, ಕಮ್ಮಾರ, ಹಡಗು ಕಟ್ಟುವವ, ಮನೆ ಕಟ್ಟುವವ, ಉಪಾಧ್ಯಾಯ, ಯೋಧ ಹೀಗೆ ಅನೇಕ ಉದ್ಯೋಗಿಗಳು ತಮ್ಮ ತಮ್ಮ ವ್ಯವಸಾಯದಲ್ಲಿ ತಕ್ಕಮಟ್ಟಿಗೆ ಜ್ಞಾನ ಸಂಪಾದಿಸಿರುತ್ತಾರೆ. ರಾಜ್ಯಭಾರ ನಡೆಸುವವರು ರಾಜ್ಯಾಧಿಕಾರ ನಡೆಸಲು

ತಕ್ಕ ಜ್ಞಾನ ಸಂಪಾದಿಸಬೇಕು. ಸಮಾಜದ ಎಲ್ಲ ಕಾರ್ಯಗಳಲ್ಲಿ ರಾಜಕಾರ್ಯ ಪ್ರಮುಖ ಸ್ಥಾನ ಪಡೆದಿದೆ. ಮಾನವ ನಾಗರಿಕತೆ ಉತ್ಕೃಷ್ಟತೆ ಪಡೆಯಬೇಕಾದರೆ ರಾಜಕಾರ್ಯವನ್ನು ತತ್ತ್ವಜ್ಞಾನಿಗಳಿಗೇ ಒಪ್ಪಿಸಬೇಕು. ತತ್ತ್ವಜ್ಞಾನಿ ಅರಸರು ಸಮಾಜದ ಸರ್ವ ವರ್ಗಗಳ ಕಾರ್ಯದಲ್ಲಿ ಸಮನ್ವಯ ಮಾಡಿ, ಸಾತ್ವಿಕ ಸಂಪತ್ತನ್ನು ಬೆಳೆಸಿ ನಾಗರಿಕರಿಗೆ ಇಹ-ಪರ ಸೌಖ್ಯ ಪಡೆಯಲು ಬೇಕಾದ ಆರ್ಥಿಕ, ಮಾನಸಿಕ ಹಾಗೂ ನೈತಿಕ ವಾತಾವರಣವನ್ನು ಸೃಷ್ಟಿಸುತ್ತಾನೆ.

ಯಾವ ರಾಜ್ಯದಲ್ಲಿ ರಾಜ್ಯಭಾರ ನಡೆಸುವವರು ತತ್ತ್ವಜ್ಞಾನಿಗಳಾಗಿರುವದಿಲ್ಲವೋ ಅಂಥ ರಾಜ್ಯಗಳಿಗೆ ಗಂಡಾಂತರ ತಪ್ಪದು. ಇದು ಪ್ಲೇಟೋ ಕಂಡ ಸತ್ಯ. ರಾಜ್ಯದ ಏಳ್ಗೆ ಅರಸರನ್ನು ಅವಲಂಬಿಸಿದೆ. ತತ್ತ್ವಜ್ಞಾನಿ ಅರಸರ ಜೀವನವು ಅಷ್ಟೇ ಅಸಮಾನ್ಯವಾದುದು. ಅವರು ನಿರಾಗಿಗಳಂತೆ ಯಾವ ಆಸೆಗೂ ಒಳಗಾಗದೆ ರಾಜ್ಯಹಿತಕ್ಕಾಗಿಯೇ ಚಿಂತಿಸುತ್ತ ಜೀವನ ಕಳೆಯುತ್ತಾರೆ. ಅವರಿಗೆ ಕುಟುಂಬ, ಆಸ್ತಿಯ ವ್ಯಾಮೋಹ ವಿರುವದಿಲ್ಲ. ಉತ್ತಮ ಆಳ್ವಿಕೆ ಸಾಧ್ಯವಾಗಬೇಕಾದರೆ ರಾಜ್ಯಾಧಿಕಾರ ನಡೆಸುವವರಲ್ಲಿ ಇಂಥ ಸಂಯಮ ನಡತೆ ಅತ್ಯವಶ್ಯ. ಒಂದು ರಾಜ್ಯದಲ್ಲಿ ಒಬ್ಬನೇ ತತ್ತ್ವಜ್ಞಾನಿ ಇದ್ದರೆ ಅವನು ತತ್ತ್ವಜ್ಞಾನಿ ಅರಸನಾಗುತ್ತಾನೆ. ಒಂದು ವೇಳೆ ಅನೇಕ ತತ್ತ್ವಜ್ಞಾನಿಗಳಿದ್ದರೆ ಅವರೆಲ್ಲ ತಮ್ಮ ಸಂಯಮ ಜೀವನವನ್ನು ಪರಮ ಸತ್ (Ideas of the Good) ಚಿಂತನದಲ್ಲಿ (contemplation) ಒಂದೆಡೆಯಿದ್ದು ಸರತಿಯ ಪ್ರಕಾರ ರಾಜ್ಯಭಾರ ನಡೆಸಬೇಕು.

ತತ್ತ್ವಜ್ಞಾನಿಗಳೇ ರಾಜ್ಯಭಾರ ನಡೆಸಬೇಕೆನ್ನುವುದು ಪ್ಲೇಟೋನ ಸಿದ್ಧಾಂತ. ಇದು ಕ್ರಾಂತಿಕಾರಕ ವಿಚಾರವಷ್ಟೇ ಅಲ್ಲ ಜಗತ್ತಿನ ಆಳರಸನ ಕಣ್ಣು ತೆರೆಯಿಸುವ ತತ್ತ್ವವಾಗಿದೆ. ಎಲ್ಲ ಉದ್ಯೋಗಕ್ಕೂ ತಕ್ಕ ಜ್ಞಾನ, ಅನುಭವ ಆವಶ್ಯ. ರಾಜ್ಯಭಾರ ನಡೆಸುವದಕ್ಕೆ ಬೇರೆ ಉದ್ಯೋಗಿಗಳಿಗಿಂತ ಹೆಚ್ಚಾದ ತತ್ತ್ವಜ್ಞಾನದ ಅರಿವು ಆವಶ್ಯಕ. ಅಂಥ ತತ್ತ್ವಜ್ಞಾನಿಗಳೇ ರಾಜ್ಯಾಧಿಕಾರ ವಹಿಸಿ ಜನಹಿತ ಮತ್ತು ರಾಷ್ಟ್ರಹಿತವನ್ನು ನಡೆಸಬೇಕು. ಇದು ತತ್ತ್ವಜ್ಞಾನಿಗಳ ಆದ್ಯ ಕರ್ತವ್ಯ.

೭. ನ್ಯಾಯಸಿದ್ಧಾಂತ

ನ್ಯಾಯ(**Justice**)ಎಂಬ ಪದವನ್ನು ಗ್ರೀಕ ತತ್ತ್ವಜ್ಞಾನಿ ಪ್ಲೇಟೊ ವಿಶಾಲ ಅರ್ಥದಲ್ಲಿ ಪ್ರಯೋಗಿಸಿದ್ದಾನೆ ನ್ಯಾಯವಾದುದು ಯಾವುದು? ಇದು ನಿರಂತರ ಪ್ರಶ್ನೆ. ಈ ಪ್ರಶ್ನೆಗೆ ಉತ್ತರರೂಪವಾಗಿ ಪ್ಲೇಟೊ ಅನೇಕರ ವಿಚಾರಗಳನ್ನು ವಿಮರ್ಶಿಸಿ ಒಂದು ನಿರ್ಧಾರಕ್ಕೆ ಬಂದಿದ್ದಾನೆ.

'ಆದರ್ಶರಾಜ್ಯ'ಗ್ರಂಥ ನ್ಯಾಯಸಿದ್ಧಾಂತದಿಂದ ಪ್ರಾರಂಭವಾಗುತ್ತದೆ. ನ್ಯಾಯಸಿದ್ಧಾಂತದ ಚರ್ಚೆ ಸೆಫಲಸ್‌ನ ಮನೆಯಲ್ಲಿ ನಡೆಯುತ್ತದೆ. ಸೆಫಲಸ್ 'ನ್ಯಾಯ' ಪದಕ್ಕೆ ಸಾಮಾನ್ಯ ವಿವರಣೆ ನೀಡುತ್ತಾನೆ. ಆತನ ಪ್ರಕಾರ ನ್ಯಾಯವೆಂದರೆ, ಸತ್ಯವನ್ನು ನುಡಿಯುವದು ಮತ್ತು ಒಬ್ಬರ ಋಣ ತೀರಿಸುವುದು. ಈ ಅರ್ಥ ಹೇಳಿ ತನ್ನ ದೇವತೆಯ

ಪ್ರಜೆಯು ವ್ಯವಸ್ಥೆಗೆ ಒಳಹೋಗುತ್ತಾನೆ. ಆತನ ಮಗ ಪೊಲಿಮಾರ್ಕಸ್ (Polemarchus) ತನ್ನ ತಂದೆಯ ವಾದವನ್ನು ಮುಂದುವರಿಸುತ್ತ, ನ್ಯಾಯವೆಂದರೆ ಒಬ್ಬ ವ್ಯಕ್ತಿಗೆ ದೊರೆಯ ಬೇಕಾದುದನ್ನು ದೊರೆಯುವಂತೆ ಮಾಡುವುದು. ಒಬ್ಬ ನ್ಯಾಯವಂತ ವ್ಯಕ್ತಿ ತನ್ನ ಮಿತ್ರರಿಗೆ ಒಳ್ಳೆಯದನ್ನು ಮತ್ತು ಶತ್ರುಗಳಿಗೆ ಕೆಡುಕನ್ನುಂಟು ಮಾಡುತ್ತಾನೆ. ಗ್ರೀಕರ ನೈತಿಕ ಜೀವನ ಚಿತ್ರಿಸುವ ಸಲೋನ ಕವಿಯ ಕವಿತೆಯಲ್ಲಿ ಈ ಪ್ರಕಾರ ಹೇಳಲಾಗಿದೆ-"ನಾನು ನನ್ನ ಮಿತ್ರರಿಗೆ ಆನಂದ ತರುವಂತೆ ಮತ್ತು ನನ್ನ ವೈರಿಗಳಿಗೆ ದ್ವೇಷ ಉಂಟಾಗುವಂತೆ ಜೀವಿಸಬೇಕು" ಈ ವಾದವನ್ನು ಸಾಕ್ರೆಟೀಸ (ಪ್ಲೇಟೋ) ಒಪ್ಪುವದಿಲ್ಲ. ಈ ರೂಢಿಗತವಾದ ನ್ಯಾಯಪದದ ಅರ್ಥದಲ್ಲಿ ದೋಷ ಕಂಡುಬರುತ್ತದೆ. ಯಾವುದೇ ಪ್ರಸಂಗದಲ್ಲಿ ಒಬ್ಬ ವ್ಯಕ್ತಿಗೆ ಅಪಾಯ ಮಾಡುವುದು ನ್ಯಾಯವಾಗಲಾರದು. ಒಳ್ಳೆಯ ವ್ಯಕ್ತಿಯ ಕರ್ತವ್ಯ ಪರರಿಗೂ ಒಳ್ಳೆಯದನ್ನೇ ಮಾಡುವುದಾಗಿದೆ. ಉಷ್ಣತೆಯ ಕಾರ್ಯ ಉಷ್ಣವನ್ನು ಕೊಡುವುದೇ ವಿನಃ ತಂಪನ್ನು ಕೊಡುವುದಿಲ್ಲ. ಅದರಂತೆ ಒಳ್ಳೆಯ ವ್ಯಕ್ತಿಯ ಕರ್ತವ್ಯ. ಹಾಗೆಯೆ ಒಳ್ಳೆಯ ವ್ಯಕ್ತಿಯ ಕರ್ತವ್ಯ ಕೆಡುಕನ್ನು ಮಾಡುವುದಲ್ಲ. ನ್ಯಾಯವಂತ ಮನುಷ್ಯ (Just Man) ಒಳ್ಳೆಯ ಮನುಷ್ಯ (Good man) ನಿರುತ್ತಾನೆ. ಆದಕಾರಣ ಒಳ್ಳೆಯ ಮನುಷ್ಯನಿಗೆ ನ್ಯಾಯವಾದುದನ್ನು ಮಾಡುವ ಹಕ್ಕಿದೆಯೇ ವಿನ ಕೆಡಕು ಮಾಡುವ ಹಕ್ಕಿಲ್ಲ. ಆತನು ಕೆಡಕಿಗೆ ಬದಲಾಗಿ ಒಳ್ಳೆಯದನ್ನೇ ಮಾಡುತ್ತಾನೆ. (A good man returns a good for evil). ಮೇಲಾಗಿ ಕೆಲವರು ಮಿತ್ರರಂತೆ ನಟಿಸಬಹುದು, ನಗುತ್ತ ಇರಬಹುದು. ಆದರೂ ದುಷ್ಟ ವೈರಿಗಳಾಗಿರಬಹುದು. ಅಂಥವರನ್ನು ಮಿತ್ರ

ರಿಂದು ಒಳ್ಳೆಯುವನ್ನು ಮಾಡಬಹುದೆ? ಈ ಪ್ರಕಾರ ವಾದ ಮಾಡಿ ರೂಢಿಗತವಾಗಿ ಬಂದ ನ್ಯಾಯಪದದ ಅರ್ಥದಲ್ಲಿರುವ ದೋಷಗಳನ್ನು ಸಾಕ್ರೆಟೀಸ ಸ್ಪಷ್ಟಪಡಿಸಿದ್ದಾನೆ. ಪೋಲೆಮಾರ್ಕಸ ತಾನು ಕೊಟ್ಟ ನ್ಯಾಯಪದದ ಅರ್ಥ ಅಸಮರ್ಪಕವಾಗಿದೆ ಯೆಂದು ಒಪ್ಪಿಕೊಳ್ಳುತ್ತಾನೆ.

ಸೋಫಿಸ್ಟರ ಪ್ರತಿನಿಧಿಯಾದ ಥ್ರಸಿಮಾಕಸ್ (Thrasy machus) ಸಹ ರೂಢಿಗತವಾದ ನ್ಯಾಯ ಪದದ ಅರ್ಥವನ್ನು ಖಂಡಿಸಿ ಪ್ರತಿಯೊಂದು ಸರಕಾರ ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಕಾಯ್ದೆಗಳನ್ನು ಮಾಡುತ್ತದೆ ಮತ್ತು ಕಾಯ್ದೆಗಳನ್ನು ಪಾಲಿಸುವುದೇ ನ್ಯಾಯವಾದ ಕರ್ತವ್ಯ. ಒಂದು ವೇಳೆ ಪಾಲಿಸದಿದ್ದರೆ ಅನ್ಯಾಯ ಮಾಡಿದಂತಾಗಿ ಅದು ಶಿಕ್ಷಾರ್ಹವಾಗುತ್ತದೆ. ಶಕ್ತಿವಂತರಿಗೆ ಹಿತವಾದುದನ್ನು ಮಾಡು ವುದೇ ನ್ಯಾಯವಾದುದು (Justice is the interest of the Stronger) ಈ ಅರ್ಥದಲ್ಲಿ ಶಕ್ತಿಯೇ ಸತ್ಯಸ್ವರೂಪ (Might is right) ಸರಿಯಾದದ್ದು ಶಕ್ತಿವಂತನ ಮನಸ್ಸಿನ ಮೇಲೆ ಅವಲಂಬಿಸಿದೆ. ಮತ್ತು ಬೇರೆಯವರಿಗೆ ಒಳ್ಳೆಯದನ್ನು ಮಾಡುವುದೇ ನ್ಯಾಯವಾದುದು ಎಂದಮೇಲೆ ಸ್ವಹಿತ ನೋಡದೇ ಎಲ್ಲರಿಗೂ ಕಲ್ಯಾಣ ಮಾಡುವ ಕಾಯ್ದೆಗಳನ್ನು ಪಾಲಿಸುವುದೇ ನ್ಯಾಯ. ನೈಸರ್ಗಿಕ ತತ್ತ್ವದ ಪ್ರಕಾರ ಪ್ರತಿ ಯೊಬ್ಬ ಮನುಷ್ಯ ತನ್ನ ಒಳ್ಳೆಯದನ್ನೇ ಬಯಸುತ್ತಾನೆ. ಜೀವನದ ನಿಜ ತತ್ತ್ವವೆಂದರೆ ಅನ್ಯಾಯ ಮಾಡುವುದೇ ಆಗಿದೆ. ಒಬ್ಬ ವ್ಯಕ್ತಿ ಕಾಯ್ದೆಗಳಿಗೆ ವಿಧೇಯನಾಗುವುದು ಅವಶ್ಯ ಕಂಡಾಗ ವಿಧೇಯನಾಗಿರಬೇಕು ಮತ್ತು ತನ್ನ ಸಂತೋಷಕ್ಕಾಗಿ

ಅವಿಧೇಯತೆ ತೋರಿಸುವುದು ಅನಿವಾರ್ಯವಾದಾಗ ಅವಿಧೇಯತೆ ತೋರಿಸಬೇಕು. ಥ್ರೆಸಿಮಾಕಸ್‌ನ ಪ್ರಕಾರ ನ್ಯಾಯ-ಅನ್ಯಾಯ ಪದಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ. ಆತನ ಪ್ರಕಾರ ಅನ್ಯಾಯವೇ ನ್ಯಾಯ. ಜೀವನ ಕಲೆ ಒಬ್ಬ ವ್ಯಕ್ತಿ ತನ್ನ ಮನೋಭಿಲಾಷೆಗಳನ್ನು ಯಶಸ್ವೀ ರೀತಿಯಲ್ಲಿ ಪೂರೈಸಿ ಕೊಳ್ಳುವುದರಲ್ಲಿದೆ. "ಯಶಸ್ವೀ ಸ್ವಾರ್ಥತನವೇ ಜೀವನದ ನಿಜವಾದ ಗುರಿ" (**Successful Selfishness is the true end of life**).

ಸಾಕ್ರೆಟೀಸ ಮೂರು ರೀತಿಯಿಂದ ಥ್ರೆಸಿಮಾಕಸ್‌ನ ವಾದವನ್ನು ಖಂಡಿಸಿದ್ದಾನೆ. ಸರ್ಕಾರ ತನ್ನ ಲಾಭಕ್ಕಾಗಿ ಆಳುತ್ತದೆ ಎಂಬ ಆತನ ವಾದವನ್ನು ತೆಗೆದುಕೊಂಡು, ಸರ್ಕಾರ ಒಂದು ಕಲೆ. ಕಲೆ ತನ್ನ ಕ್ಷೇತ್ರದಲ್ಲಿರುವ ಅಪರಿಪೂರ್ಣತೆಯನ್ನು ತೊಡೆದು ಹಾಕುವುದರಲ್ಲಿದೆ. ಕಲೆಯಲ್ಲಿ ಕುಂದು-ಕೊರತೆಗಳನ್ನು ಸರಿಪಡಿಸುವ ಶಕ್ತಿಯಿದೆ. ಸರಕಾರ ಅಸ್ತಿತ್ವದಲ್ಲಿ ಬರಬೇಕಾದರೆ ಸಮಾಜದಲ್ಲಿಯ ಅಪರಿಪೂರ್ಣತೆಯೇ ಕಾರಣ. ಸರಕಾರ ಒಂದು ಕಲೆಯೆಂದು ಒಪ್ಪಿದ ಮೇಲೆ ಸರಕಾರದ ಕರ್ತವ್ಯ ಸಮಾಜದ ಕುಂದುಕೊರತೆಗಳನ್ನು ತೊಡೆದು ಹಾಕುವುದು. ಅಂದರೆ ಆಳುವವರು ಆಳಲ್ಪಡುವವರ ಹಿತಾಸಕ್ತಿಗಳನ್ನು ಗಮನಿಸಬೇಕು.

ಯಶಸ್ವೀ ಸ್ವಾರ್ಥತನವೇ ಜೀವನದ ಗುರಿಯೆಂದು ಸಮರ್ಥಿಸುವಾಗ ಅನ್ಯಾಯವೇ ನ್ಯಾಯಕ್ಕಿಂತ ಒಳ್ಳೆಯದೆಂದು ಥ್ರೆಸಿಮಾಕಸ್ ಹೇಳಿದ್ದನ್ನು ಸಾಕ್ರೆಟೀಸ್ ಖಂಡಿಸುತ್ತಾನೆ.

ಅನ್ಯಾಯವಾವುದು ? ಜೀವನದ ಒಳ್ಳೆಯದನ್ನು ಹೆಚ್ಚು ಪಡೆಯುವ ಪ್ರಯತ್ನ ಮಾಡಿದಾಗ ಅನ್ಯಾಯವೆಂದು ಹೇಳುತ್ತೇವೆ. ನ್ಯಾಯವು ಸಮಾನತೆಯ ತಳಹದಿಯ ಮೇಲೆ ನಿಂತಿದೆ. ಆದ ಕಾರಣ ನ್ಯಾಯವೇ ಒಳ್ಳೆಯದು.

ಅನ್ಯಾಯದಲ್ಲಿಯೇ ಜಾಣತನ, ಶಕ್ತಿ, ಸಂತೋಷ ಇದೆ ಎಂಬ ವಾದವನ್ನು ಸಾಕ್ರೆಟೀಸ ಅಲ್ಲಗಳೆದಿದ್ದಾನೆ. ಸಂತೋಷ ತನ್ನ ಕರ್ತವ್ಯವನ್ನು ಉತ್ಕೃಷ್ಟತೆಯಿಂದ ಮಾಡುವುದರಲ್ಲಿದೆ. ಒಳ್ಳೆಯ ಜೀವನವನ್ನು ನಡೆಸುವುದು ಆತ್ಮದ ಕ್ರಿಯಾಶಕ್ತಿಯಾಗಿದೆ. ಆದಕಾರಣ ನ್ಯಾಯ, ಮನುಷ್ಯನಿಗೆ ಸಂತೋಷ ಕೊಡುವುದು. ತನ್ನ ಕರ್ತವ್ಯದಲ್ಲಿ ಸಂತೋಷ ಕಂಡುಕೊಳ್ಳುವುದರಲ್ಲಿ ನ್ಯಾಯವಿದೆ. ಆದಕಾರಣ ನ್ಯಾಯ ಮತ್ತು ಸಂತೋಷ ಬೇರ್ಪಡಿಸಲಾರದ ವಿಷಯಗಳಾಗಿವೆ. ನ್ಯಾಯವಂತ ವ್ಯಕ್ತಿ ಜಾಣನೂ ಆಗಿರುತ್ತಾನೆ. ಏಕೆಂದರೆ ಆತನಿಗೆ ಜೀವನದ ಮಿತಿಗಳನ್ನು ಮೀರಬಾರದೆಂಬ ಅರಿವಿರುತ್ತದೆ. ಇದೇ ಜೀವನಮಿತಿಗಳ ಅರಿವು ನ್ಯಾಯವಂತ ವ್ಯಕ್ತಿಗೆ ಶಕ್ತಿ ತರುತ್ತದೆ. ಈ ವಿವರಣೆ ಅನ್ಯಾಯಕ್ಕಿಂತ ನ್ಯಾಯ ಮೇಲಾದುದೆಂಬುದನ್ನು ಸ್ಪಷ್ಟಪಡಿಸುತ್ತದೆ.

ಸಾಕ್ರೆಟೀಸನ ಮಿತ್ರನಾದ ಗ್ಲುಕೋನ (Glaucon) ನ್ಯಾಯವೆಂಬುದು ರೂಢಿಯನ್ನು ಅವಲಂಬಿಸಿದ್ದು. ಮಾನವ ಅನುಭವ ಮತ್ತು ಸ್ವಭಾವಗಳು ನ್ಯಾಯ ಮಾಡುವುದು ಒಳ್ಳೆಯದು ಹಾಗು ಅನ್ಯಾಯ ಅನುಭವಿಸುವುದು ಕೆಟ್ಟದ್ದು ಎಂಬ ಮಾತುಗಳನ್ನು ಒಪ್ಪುತ್ತವೆ. ಕಾರಣ ಮಾನವರು ತಮ್ಮಲ್ಲೇ ಒಂದು ಒಪ್ಪಂದ ಮಾಡಿಕೊಂಡು ನ್ಯಾಯ ಅನ್ಯಾಯಗಳೆರಡರ

ಬದಲಾಗಿ ಕಾಯ್ದೆಯನ್ನು ನಿರ್ಮಿಸಿದರು. ಕಾಯ್ದೆಯ ಪ್ರಕಾರ ಆಳಲ್ಪಡಲು ಒಪ್ಪಿದರು. ಕಾಯ್ದೆಯೇ ನ್ಯಾಯವಾಗಿದೆ. ಕಾಯ್ದೆ ರೂಢಿಯನ್ನು ಅವಲಂಬಿಸಿದೆ, ಮಾನವ ನಿರ್ಮಿತವಾಗಿದೆ. ಕಾಯ್ದೆಯನ್ನು ಮನಸ್ಸಿಲ್ಲದೇ ಪಾಲಿಸುವ ಪ್ರಸಂಗ ಬರುತ್ತದೆ. ಏಕೆಂದರೆ ಮನುಷ್ಯನು ಮಾನವ ನಿರ್ಮಿತ ನಿಯಮಗಳನ್ನು ಸುಲಭವಾಗಿ ಪಾಲಿಸುವದಿಲ್ಲ. ಸಮಾಜದಲ್ಲಿಯ ಅನೇಕ ಒತ್ತಡಗಳಾದ ಸಾರ್ವಜನಿಕ ಅಭಿಪ್ರಾಯ, ತತ್ತ್ವವಿಚಾರಗಳ ಪ್ರಭಾವ ಮನುಷ್ಯನ ಅಂತರಾತ್ಮದ ನಿರ್ದೇಶನ ಮತ್ತು ರಾಜ್ಯದ ಅಧಿಕಾರ ಸಮಾಜದಲ್ಲಿಯ ರೀತಿಗೆ ರೂಪಕೊಡುತ್ತವೆ. ಈ ದೃಷ್ಟಿಯಿಂದ ನೀತಿ ಅಧಿಕಾರವನ್ನು ಅವಲಂಬಿಸಿದೆ.

ಗ್ಲುಕೋನನ ವಾದವನ್ನು ಸಾಕ್ರೆಟೀಸ್ ಪೂರ್ಣವಾಗಿ ಒಪ್ಪುವದಿಲ್ಲ. ಏಕೆಂದರೆ ಮನುಷ್ಯ ಕಾಯ್ದೆಗೆ ವಿಧೇಯತೆ ತೋರಿಸುವುದು, ಹಿಂದಿನ ಒಪ್ಪಂದದ ಪ್ರಕಾರ ಎನ್ನುವುದು ನಂಬಲಸಾಧ್ಯ ಮಾತಾಗಿದೆ. ಮಾನವ ಇತಿಹಾಸದಲ್ಲಿ ಇಂಥ ಒಪ್ಪಂದದ ಉದಾಹರಣೆಗಳು ಸಿಗುವುದಿಲ್ಲ.

ಗ್ಲುಕೋನ, ಸದ್ವರ್ತನೆ ಒಳ್ಳೆಯದು ಆದರೆ ಆಚರಿಸುವುದು ಕಷ್ಟಕರ ಎಂದು ಹೇಳಿ, ಸಮರ್ಥನೆ ಮಾಡುತ್ತ ಜಗತ್ತಿನಲ್ಲಿ ದುಷ್ಟ ವ್ಯಕ್ತಿಗಳೇ ಸುಖದಿಂದಿರುವುದನ್ನು ಮತ್ತು ಶಿಷ್ಟರು ದುಃಖದಲ್ಲಿರುವುದನ್ನು ನೋಡಬಹುದು ಎಂದು ಹೇಳುತ್ತಾನೆ. ಆದರೆ ನೈತಿಕ ಆದರ್ಶ ಮತ್ತು ಇಹದ ಸೌಖ್ಯ ಇವುಗಳ ಸಂಬಂಧ ಕಲ್ಪಿಸುವುದೇ ತಪ್ಪೆಂದು ಸಾಕ್ರೆಟೀಸ ಆತನ ವಾದವನ್ನು ಖಂಡಿಸುತ್ತಾನೆ.

ಹೀಗೆ ಪ್ಲೇಟೊ ನ್ಯಾಯ ಸಿದ್ಧಾಂತದ ಮೇಲೆ ಗ್ರೀಕ ಜಗತ್ತಿನಲ್ಲಿರುವ ಪ್ರಚಲಿತ ವಿಚಾರಗಳನ್ನು ವಿಮರ್ಶಿಸಿ ತನ್ನ ಅಭಿಪ್ರಾಯಗಳಿಗೆ ಖಚಿತರೂಪ ಕೊಟ್ಟು, ವೈಜ್ಞಾನಿಕವಾಗಿ ವಿವೇಚಿಸಿದ್ದಾನೆ.

ನ್ಯಾಯವೆಂದರೇನು ? ನ್ಯಾಯವೆಲ್ಲಿರುತ್ತದೆ ? ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೆ ನಾವು ಮೊದಲು ಆದರ್ಶ ಸಮಾಜ ಅಥವಾ ಆದರ್ಶರಾಜ್ಯ ನೋಡಬೇಕು. ಪರಿಪೂರ್ಣ ರಾಜ್ಯದಲ್ಲಿ ನಾಲ್ಕು ಸದ್ಗುಣಗಳನ್ನು ಕಾಣುತ್ತೇವೆ:

೧. ಬುದ್ಧಿವಂತಿಕೆ (Wisdom)
೨. ಧೈರ್ಯ (Courage)
೩. ತಾಳ್ಮೆ (Temperance)
೪. ನ್ಯಾಯ (Justice)

ಇಡೀ ರಾಜ್ಯದ ಹಿತದೃಷ್ಟಿಯಿಂದ ಹೇಗೆ ರಾಜ್ಯ ಆಳಬೇಕೆಂಬ ತಿಳಿವಳಿಕೆಯೇ ಜ್ಞಾನ. ರಾಜ್ಯದ ಕಾರ್ಯ ಮಾಡುವ ಅಂಗದಲ್ಲಿ ಇಂಥ ಜ್ಞಾನವುಳ್ಳವರಿರಬೇಕು. ಆಗ ಆ ರಾಜ್ಯದಲ್ಲಿ ಬುದ್ಧಿವಂತಿಕೆ (wisdom) ಇರವುದೆಂದು ಹೇಳಬಹುದು.

ಪ್ರತಿಯೊಂದು ರಾಜ್ಯದಲ್ಲಿ ರಾಷ್ಟ್ರಕ್ಕೆ ಬರುವ ಅಪಾಯಗಳನ್ನು ಎದುರಿಸುವ ಧೀರ ವರ್ಗ ಇರಬೇಕು. ಆಗ ರಾಷ್ಟ್ರ ಸುರಕ್ಷಿತವಾಗಿರುತ್ತದೆ. ಈ ಧೀರ ವರ್ಗಕ್ಕೆ ಜನರನ್ನು ಸೇರಿಸುವಾಗ ಬಹಳ ಜಾಗೃತವಾಗಿರಬೇಕು. ರಾಷ್ಟ್ರದ ಅಳಿವು-ಉಳಿವು ಈ ವರ್ಗದ ಮೇಲೆ ಅವಲಂಬಿಸಿರುತ್ತದೆ ಪ್ಲೇಟೊ ನಾಗರಿಕನ

ಧೈರ್ಯ ಮತ್ತು ಗುಲಾಮರ ಧೈರ್ಯದಲ್ಲಿರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾನೆ. ನಾಗರಿಕನ ಧೈರ್ಯ ವಿವೇಕದ, ಕಾಯ್ದೆಗೆ ವಿಧೇಯತೆ ತೋರಿಸುವ ಜಾಗೃತ ಧೈರ್ಯ. ಗುಲಾಮನ ಧೈರ್ಯ ಅವಿವೇಕದ, ಕಾಯ್ದೆಗೆ ವಿಧೇಯತೆ ತೋರಿಸದ ಕುರುಡಧೈರ್ಯ ವಾಗಿದೆ.

ಮನುಷ್ಯ ತನ್ನ ಮೇಲೆ ತನ್ನ ಒಡೆತನ (Self Control) ಪಡೆಯಬೇಕು. ಅಂದರೆ ಉತ್ತಮ ಅಂಶ ಕೆಟ್ಟ ಅಂಶಗಳನ್ನು ನಿಯಂತ್ರಿಸುತ್ತದೆ. ರಾಜ್ಯದಲ್ಲಿಯೂ ಸಹ ನೈಸರ್ಗಿಕವಾಗಿ ಕೆಳಮಟ್ಟದಲ್ಲಿರುವವರು ಉತ್ತಮರಾದವರಿಗೆ ವಿಧೇಯತೆ ತೋರಿಸಬೇಕು. ಆದರ್ಶರಾಜ್ಯದಲ್ಲಿ ಯಾರು ಆಳಬೇಕು, ಯಾರು ವಿಧೇಯತೆ ತೋರಿಸಬೇಕೆಂಬ ಕಲ್ಪನೆ ಇದೆ ಮತ್ತು ಶಿಸ್ತು ತಂತಾನೆ ಬೆಳೆಯುತ್ತದೆ. ಕಾರಣ ಶಿಸ್ತು ಮತ್ತು ಆತ್ಮ ನಿಯಂತ್ರಣವೆಂದರೆ ಸಮಾಜದ ಎಲ್ಲ ವರ್ಗಗಳ ಅನೇಕತೆಯಲ್ಲಿ ಏಕತೆ ಮೂಡಿಸುವ ಮಧುರ ಸಂಬಂಧವಾಗಿದೆ.

ಪ್ಲೇಟೊ ನ್ಯಾಯಕ್ಕೆ ಉಚ್ಚಸ್ಥಾನವಿತ್ತಿದ್ದಾನೆ. ರಾಜ್ಯದ ಇತರ ಲಕ್ಷಣಗಳು ನ್ಯಾಯವನ್ನು ಅವಲಂಬಿಸಿವೆ. ಪ್ರತಿಯೊಬ್ಬ ವ್ಯಕ್ತಿ ರಾಜ್ಯದಲ್ಲಿ ತನಗೆ ನೈಸರ್ಗಿಕವಾಗಿ ಉತ್ತಮನೆನಿಸಿದ ಕಾರ್ಯದಲ್ಲಿ ಪ್ರವೃತ್ತನಾಗಬೇಕು. ಬೇರೆಯವರ ಕಾರ್ಯದಲ್ಲಿ ಅತಿಕ್ರಮಣ ಮಾಡಬಾರದು, ಇದೇ ನ್ಯಾಯ. ಸಮಾಜದಲ್ಲಿಯ ಮೂರು ವರ್ಗಗಳು ತಮ್ಮ ತಮ್ಮ ಕಾರ್ಯಗಳನ್ನು ಉತ್ಕೃಷ್ಟತೆ

ಯಿಂದ ಮಾಡುತ್ತಿದ್ದರೆ ಆ ರಾಜ್ಯದಲ್ಲಿ ನ್ಯಾಯವಿದೆಯೆಂದು ಹೇಳಬಹುದು. ಸಮಾಜದ ಮೂರು ವರ್ಗಗಳು—

i) ಉತ್ಪಾದಿಸುವ ವರ್ಗ (Producing type)

ii) ಸೈನಿಕ ವರ್ಗ (Military type)

iii) ಆಳುವ ವರ್ಗ (Ruling type)

ತಮ್ಮ ತಮ್ಮ ಕಾರ್ಯಗಳನ್ನು ಒಳ್ಳೆಯ ರೀತಿಯಿಂದ ಮಾಡುತ್ತಾ ಕೂಡಿದ್ದು ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದೇ ಸಾಮಾಜಿಕ ನ್ಯಾಯ. ರಾಜ್ಯದ ನ್ಯಾಯ ನಾಗರಿಕನ ಸ್ಥಾನ, ಕರ್ತವ್ಯ ಪ್ರಜ್ಞೆಗಳ ಮೇಲೆ ಅವಲಂಬಿಸಿದೆ. ಪ್ರತಿಯೊಬ್ಬ ನಾಗರಿಕ ಪ್ರತ್ಯೇಕವಾಗಿರದೆ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದು ನಿರ್ದಿಷ್ಟ ಕರ್ತವ್ಯ ಮಾಡುವ ವ್ಯಕ್ತಿ. ರಾಜ್ಯವೇ ಪೂರ್ಣ ಸ್ವರೂಪ (whole) ನಾಗರಿಕ ರಾಜ್ಯದ ಒಂದು ಭಾಗ ಅಥವಾ ಅಂಶ (part).

ವ್ಯಕ್ತಿಯಲ್ಲಿ ಮೂರು ಅಂಶಗಳನ್ನು ಕಾಣುತ್ತೇವೆ :

೧. ವಿಚಾರ (Reason)

೨. ಉತ್ಸಾಹ (Spirit)

೩. ಆಶೆ ಅಥವಾ ಹಸಿವು (Desire or appetite).

ವ್ಯಕ್ತಿಯಲ್ಲಿಯ ಆಶೆ ಮತ್ತು ಉತ್ಸಾಹ ವಿಚಾರದ ನಿಯಂತ್ರಣದಲ್ಲಿದ್ದರೆ ಮಾತ್ರ ನ್ಯಾಯವಿರುತ್ತದೆ. ಮತ್ತು ಆತನು ಶಿಸ್ತಿನಿಂದಿರುತ್ತಾನೆ. ಈ ಮೂರೂ ಅಂಶಗಳು ಒಂದ ಕೊಂದು ಹೊಂದಿಕೊಂಡು ಕಾರ್ಯ ಮಾಡುತ್ತಿದ್ದರೆ ಆ ವ್ಯಕ್ತಿ ನ್ಯಾಯವಂತನಾಗುವನು.

ಈ ಪ್ರಕಾರ ಪ್ಲೇಟೊ ಸಾಮಾಜಿಕ ಮತ್ತು ವ್ಯಕ್ತಿಯ ನ್ಯಾಯ ಸಿದ್ಧಾಂತಗಳನ್ನು ಮಂಡಿಸಿದ್ದಾನೆ. ಈ ಸಿದ್ಧಾಂತದ ಮೇಲೆಯೇ ಜ್ಞಾನವೇ ಆಳಬೇಕು (Reason ought to rule) ಮತ್ತು ಅಂತಃಶಕ್ತಿ (Spirit) ಅದರ ಆಧೀನವಾಗಿರಬೇಕು. ಇಂಥ ಹೊಂದಾಣಿಕೆ ಬೌದ್ಧಿಕ ಹಾಗು ದೈಹಿಕ ಶಿಕ್ಷಣದಿಂದ ಸಾಧ್ಯವಾಗುತ್ತದೆ. ಅರಿವು (Reason) ಮತ್ತು ಧೀರತನ (Courage) ಎರಡೂ ಕೂಡಿ ಹಸಿವನ್ನು (appetite) ಸಂಪೂರ್ಣ ನಿಯಂತ್ರಿಸಬೇಕು. ಆಗ ವ್ಯಕ್ತಿಯಲ್ಲಿ ಶಿಸ್ತು ಮತ್ತು ಆತ್ಮ ನಿಯಂತ್ರಣ ಸಾಧ್ಯವಾಗುವುದು.

ನ್ಯಾಯ ಜೀವನದ ತತ್ತ್ವವಾಗಿದೆ. ಅದು ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ಕೃತಿಗಳಿಗೆ ಸಂಬಂಧಪಟ್ಟಿರುತ್ತದೆ. ಒಬ್ಬ ವ್ಯಕ್ತಿ ಈ ಮೂರು ಶಕ್ತಿಗಳನ್ನು ಸರಿಯಾಗಿ ಹೊಂದಿಸಿ ತನ್ನ ಮೇಲೆ ಸ್ವನಿಯಂತ್ರಣಸಾಧಿಸಿ ಮನಃಶಾಂತಿ ಪಡೆಯುತ್ತಾನೆ. ಹಾಗೆಯೇ ರಾಜ್ಯದಲ್ಲಿ ಮೂರುವರ್ಗಗಳು ಹೊಂದಾಣಿಕೆಯಿಂದ ತಮ್ಮ ತಮ್ಮ ಕರ್ತವ್ಯಗಳಲ್ಲಿ ಉತ್ಕೃಷ್ಟತೆ ತೋರಿಸಿ ರಾಷ್ಟ್ರವನ್ನು ಸ್ವಾವಲಂಬಿಯಾಗಿ ಮಾಡಿ ಆಂತರಿಕ ಸಮಸ್ಯೆಗಳಿಗೆ ಆಸ್ಪದ ಕೊಡದೆ ಶಾಂತಿ ಮತ್ತು ಸಮೃದ್ಧಿಗಳಿಗೆ ಎಡೆ ಮಾಡಿ ಕೊಡುತ್ತದೆ. ಇದೇ ನ್ಯಾಯ. ಇಂಥ ಮಧುರ ಸಂಬಂಧ ರಾಜ್ಯದಲ್ಲಿಯ ವರ್ಗಗಳಲ್ಲಿ ಇಲ್ಲದಿದ್ದರೆ ಆ ರಾಜ್ಯದಲ್ಲಿ ಅನ್ಯಾಯ ಅಶಿಸ್ತು, ಹೇಡಿತನ, ಅಜ್ಞಾನ ಮತ್ತು ಎಲ್ಲ ರೀತಿಯ ದುಷ್ಟ ಶಕ್ತಿಗಳು ರಾರಾಜಿಸುತ್ತವೆ.

ಪ್ಲೇಟೊ, ನ್ಯಾಯ ಒಳ್ಳೆಯದೆ? ಅನ್ಯಾಯ ಒಳ್ಳೆಯದೆ? ಎಂಬ ಪ್ರಶ್ನೆ ಅರ್ಥಹೀನವಾದುದೆಂದು ಹೇಳಿದ್ದಾನೆ. ಏಕೆಂದರೆ

ಮನುಷ್ಯನಿಗೆ ಆಹಾರ, ನೀರು, ಸಂಪತ್ತು ಮತ್ತು ಅಧಿಕಾರ ವಿದ್ದೂ, ಆರೋಗ್ಯವಿಲ್ಲದಿದ್ದರೆ ಜೀವಿಸುವುದರಲ್ಲಿ ಅರ್ಥವಿಲ್ಲ. ಹಾಗೆಯೇ ಜೀವನತತ್ವದ ವಿರುದ್ಧ ಗೊಂದಲಮಯ ವಾತಾವರಣ ಉಂಟಾದಾಗ ಜೀವನವೇ ಅರ್ಥಹೀನವಾಗುತ್ತದೆ. ಆದಕಾರಣ ನ್ಯಾಯ ವ್ಯಕ್ತಿಗೆ ಸಮಾಜಕ್ಕೆ ಮತ್ತು ರಾಜ್ಯಕ್ಕೆ ಪ್ರಾಣಸಮಾನ ವಾದ ತತ್ತ್ವ.

೮. ಸಮತಾವಾದ ಸಿದ್ಧಾಂತ

(Theory of Communism)

ಪ್ಲೇಟೊ ಆದರ್ಶರಾಜ್ಯದ ಸಮಾಜದಲ್ಲಿ ಮೂರು ವರ್ಗ ಗಳನ್ನು ಮಾಡಿದ್ದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಈ ಮೂರು ವರ್ಗಗಳಲ್ಲಿ ಎರಡು ವರ್ಗಗಳಾದ ತಾತ್ವಿಕ ಮತ್ತು ಸೈನಿಕ ವರ್ಗಗಳನ್ನು ಒಟ್ಟುಗೂಡಿಸಿ ರಕ್ಷಕ ವರ್ಗ(Guardian class) ಎಂದು ಕರೆದಿದ್ದಾನೆ. ಪ್ಲೇಟೋನ ಸಮತಾವಾದ ಈ ರಕ್ಷಕ ವರ್ಗಕ್ಕೆ ಮಾತ್ರ ಸೀಮಿತ. ಉತ್ತಮ ನಾಗರಿಕತೆಗೆ ಯಾವ ಯಾವ ರೂಢಿಗಳು ಮತ್ತು ಸಮಾಜ ಪದ್ಧತಿಗಳು ಅಡ್ಡ ಬರುವವೋ ಅವುಗಳನ್ನು ಹಿಂದು-ಮುಂದು ನೋಡದೇ ತನ್ನ ಆದರ್ಶರಾಜ್ಯದಲ್ಲಿ ಸಮತಾವಾದ ಸಿದ್ಧಾಂತದಿಂದ ತೊಡೆದು ಹಾಕಿದ್ದಾನೆ. ಅವನದು ವಾವಲಹರಿ ತತ್ತ್ವಜ್ಞಾನ (Doctrinnaire philosophy) ಇಲ್ಲಿ ವಾಸ್ತವಿಕತೆ ಮತ್ತು ಕಾರ್ಯ ರೂಪಕ್ಕೆ ತರುವ ಸಾಧ್ಯಾಸಾಧ್ಯತೆಗಳ ವಿಚಾರವಿಲ್ಲ. ಅವನು ತನ್ನ ಅನುಭವದಿಂದ ಸಮಾಜದ ಎರಡು ಪದ್ಧತಿಗಳು ದೋಷ

ಪೂರಿತಗಳೆಂದು ತೀರ್ಮಾನಿಸಿದ್ದಾನೆ. ಅವು, ಆಸ್ತಿಯ ಹಕ್ಕು ಮತ್ತು ಕುಟುಂಬ ಪದ್ಧತಿ. ಆಸ್ತಿಗಾಗಿ ಮತ್ತು ತನ್ನ ಮನೆತನಕ್ಕಾಗಿ ಎಂಥ ಕೆಟ್ಟ ಕೆಲಸಕ್ಕಾಗಿಯಾದರೂ ಮಾನವ ಸಿದ್ಧನಾಗುತ್ತಾನೆ. ಅವು ಆಶೆ-ಆಮಿಷಗಳನ್ನು ಬೇರೂರಿಸುವ ಮತ್ತು ಮನುಷ್ಯನ ಮನಸ್ಸನ್ನು ಕೆಡಿಸುವ ಸಮಾಜ ವಿರೋಧೀ ಪದ್ಧತಿಗಳೆಂದು ವಿಚಾರಮಾಡಿ ತಕ್ಕ ಔಷಧಿ ಎಂಬಂತೆ ರಕ್ಷಕ ವರ್ಗಕ್ಕೆ ಸಮತಾವಾದ ಅನ್ವಯಿಸಿದ್ದಾನೆ. ಉತ್ಪಾದಿಸುವ ವರ್ಗಕ್ಕೆ (Producing Class) ಸಮತಾವಾದವನ್ನು ಅನ್ವಯಿಸಿಲ್ಲ. ಆದಕಾರಣ ವೈಯಕ್ತಿಕವಾದ ಉತ್ಪಾದಿಸುವ ಪದ್ಧತಿ ನಿರ್ವಿಘ್ನವಾಗಿ ಆದರ್ಶರಾಜ್ಯದಲ್ಲಿ ನಡೆಯುವಂತೆ ಮಾಡಿದ್ದಾನೆ.

ಆದರ್ಶರಾಜ್ಯದ ಸಮಾಜದಲ್ಲಿ ಜವಾಬ್ದಾರಿ ಕಾರ್ಯನಿರ್ವಹಿಸುವ ತತ್ತ್ವಜ್ಞಾನಿಗಳು ಮತ್ತು ಸೈನಿಕರು ಆಶೆಗಳಿಗೆ ತುತ್ತಾಗದೆ ನಿಸ್ವಾರ್ಥ ಬುದ್ಧಿಯಿಂದ ರಾಜ್ಯದ ಸಾವೆಯನ್ನು ನಡೆಸಬೇಕು. ಕಾರಣ ಅವರಿಗೆ ಆಸ್ತಿಯ ಹಕ್ಕಿಲ್ಲ. ರಕ್ಷಕವರ್ಗ ಒಂದೇ ಕುಟುಂಬದವರಂತೆ ಒಂದೇ ಛಾವಣಿ (Barracks) ಯಲ್ಲಿ ವಾಸಿಸಬೇಕು, ಒಟ್ಟುಗೂಡಿ ಭೋಜನ ಮಾಡಬೇಕು.

ಪ್ಲೇಟೊ ರಕ್ಷಕವರ್ಗಕ್ಕೆ ಆಸ್ತಿ ನಿಷೇಧಿಸಿದ್ದಾನೆ. ಇಲ್ಲಿ ಸ್ಪಾರ್ಟಾ ನಗರ ರಾಜ್ಯದ ಪ್ರಭಾವ ಅವನ ಮೇಲಾಗಿದೆ. ಸ್ಪಾರ್ಟಾ ನಗರ ರಾಜ್ಯದಲ್ಲಿ ನಾಗರಿಕರು ವ್ಯಾಪಾರದಲ್ಲಿ ಮತ್ತು ಹಣಕಾಸಿನ ವ್ಯವಹಾರ ಮಾಡುತ್ತಿದ್ದಿಲ್ಲ. ರಾಜ್ಯದಲ್ಲಿ ಒಕ್ಕಟ್ಟು ಹೆಚ್ಚಾಗಿ ಬೆಳೆಯಲು ಆಸ್ತಿನಿಷೇಧ ಅನಿವಾರ್ಯ ಎಂದು ಅವನು ತಿಳಿದಿದ್ದ. ಸಮಾಜದಲ್ಲಿ ಆಸ್ತಿನಿಷೇಧಿಸುವುದರಿಂದ ಶ್ರೀಮಂತರ

ಯೋಗಳಿಕೆ, ಆಸ್ತಿಯ ಚಿಂತೆ, ಸಾಲದ ಶೂಲಗಳಿರುವುದಿಲ್ಲ. ರಕ್ಷಕ ವರ್ಗ ತನ್ನ ಪೂರ್ಣ ವೇಳೆ ಮತ್ತು ಶಕ್ತಿಗಳನ್ನು ರಾಜ್ಯದ ಹಿತಕ್ಕಾಗಿ ಉಪಯೋಗಿಸಲು ಸಾಧ್ಯವಾಗುತ್ತದೆ.

ಪ್ಲೇಟೋ ರಕ್ಷಕವರ್ಗಕ್ಕೆ ಮೂರು ಕಾರಣಗಳಿಂದ ಕುಟುಂಬ ನಿಷೇಧಿಸಿದ್ದಾನೆ. ಮನೆತನದ ಪ್ರೀತಿ ಮತ್ತು ಚಿಂತೆ ಆಳುವವರನ್ನು ಕರ್ತವ್ಯಚ್ಯುತರನ್ನಾಗಿ ಮಾಡುತ್ತವೆ. ರಕ್ಷಕ ವರ್ಗ ಸ್ವಾರ್ಥಿಯಾದರೆ ರಾಜ್ಯದ ಏಳ್ಗೆ ಆಗದು. ರಕ್ಷಕವರ್ಗದಲ್ಲಿ ಮನೆತನದ ಹಿತಕ್ಕಿಂತ ರಾಜ್ಯಹಿತದೃಷ್ಟಿ ವರ್ಧಿಸಲು ಪ್ಲೇಟೋ ಕುಟುಂಬ ನಿಷೇಧಿಸುವ ಸಮತಾವಾದ ಪ್ರತಿಪಾದಿಸಿದ್ದಾನೆ.

ಪ್ಲೇಟೋ ಸ್ತ್ರೀ-ಪುರುಷರಲ್ಲಿ ಸರಿಸಮಾನ ಶಕ್ತಿಗಳಿವೆ ಎಂದು ಹೇಳಿದ ಪ್ರಥಮ ತತ್ತ್ವಜ್ಞಾನಿ. ಸ್ತ್ರೀಯರು ಸಮಾಜದ ಅರ್ಧ ಶಕ್ತಿಯಾಗಿದ್ದಾರೆ. ಪುರುಷರ ಸ್ವಾರ್ಥ, ಸ್ತ್ರೀಯರನ್ನು ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂದಿಗಳನ್ನಾಗಿ ಮಾಡಿದೆ. ಸ್ತ್ರೀ-ಪುರುಷರ ಅಂತರ ಕೇವಲ ಕಾಲ್ಪನಿಕವಾದುದು. ಪುರುಷರಷ್ಟೇ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅವಕಾಶಗಳನ್ನು ಸ್ತ್ರೀಯರಿಗೂ ಒದಗಿಸಿದರೆ ಅವರೂ ಸಹ ಪುರುಷರಷ್ಟೇ ದಕ್ಷತೆಯಿಂದ ರಾಜ್ಯದ ಕರ್ತವ್ಯಗಳನ್ನು ನಿರ್ವಹಿಸಬಹುದು. ಸ್ತ್ರೀಯರ ಮಾನವಶಕ್ತಿ (Man Power) ಯನ್ನು ರಾಜ್ಯದ ಏಳ್ಗೆಗಾಗಿ ಪೂರ್ಣವಾಗಿ ಉಪಯೋಗಿಸಬೇಕೆಂಬ ಇಚ್ಛೆಯಿಂದ ಪ್ಲೇಟೋ ಸ್ತ್ರೀಯರಿಗೆ ಸಮಾಜದಲ್ಲಿ ಪುರುಷರ ಸಮಾನ ಸ್ಥಾನ ಕಲ್ಪಿಸಿದ್ದಾನೆ.

ಪ್ಲೇಟೋ ವಿವಾಹ ಪದ್ಧತಿಯನ್ನು ರಕ್ಷಕವರ್ಗಕ್ಕೆ ನಿಷೇಧಿಸಿದ್ದಾನೆ. ಸ್ತ್ರೀ-ಪುರುಷರ ಲೈಂಗಿಕ ಸಂಬಂಧ ರಾಜ್ಯದ ನಿರ್ದೇ

ಶನದ ಮೇರೆಗೆ ನಡೆಯಬೇಕು. ಪ್ಲೇಟೊ ಉತ್ತಮ ಶಿಶುಗಳನ್ನು ಹುಟ್ಟಿಸುವ ಶಾಸ್ತ್ರದ (**Science of Eugenics**) ಪ್ರಕಾರ ಶೌರ್ಯ ಮತ್ತು ಸೌಂದರ್ಯಗಳ ಸಂಗಮದಿಂದ ನವಜನಾಂಗ ನಿರ್ಮಾಣವಾಗಬೇಕು ಎನ್ನುತ್ತಾನೆ. ರಾಜ್ಯದಲ್ಲಿ ಶಿಶುಗಳ ಉತ್ಪಾದನೆ ಒಂದು ಮಹತ್ವದ ಕ್ರಿಯೆ. ಇಂಥ ಕ್ರಿಯೆಯಲ್ಲಿ ವ್ಯಕ್ತಿಗಳಿಗೆ ಸ್ವಾತಂತ್ರ್ಯ ಕೊಡುವುದು ಒಳ್ಳೆಯದಲ್ಲ. ರಾಜ್ಯ ನಿರ್ದೇಶನದ ಮೇಲೆ ಹುಟ್ಟಿದ ಶಿಶುಗಳನ್ನು ರಾಜ್ಯವೇ ತನ್ನ ರಕ್ಷಣೆಗೆ ತೆಗೆದುಕೊಂಡು ಜೋಪಾನ ಮಾಡಬೇಕು. ಸ್ತ್ರೀ ರಕ್ಷಕ ವರ್ಗ ಸಂತಾನದ ಚಿಂತೆಗಳಿಂದ ದೂರವಿದ್ದು ಪುರುಷ ರಕ್ಷಕ ವರ್ಗದ ಜೊತೆಗೆ ಸರಿಸಮಾನವಾಗಿ ರಾಜ್ಯಭಾರ ನಿರ್ವಹಿಸುವ ಸಾಮರ್ಥ್ಯ ಪಡೆಯಬೇಕು.

ರಾಜ್ಯದ ಒಕ್ಕಟ್ಟು, ಸಮಾಜದ ಅರ್ಧಶಕ್ತಿಯಾದ ಸ್ತ್ರೀಯರನ್ನು ರಾಜ್ಯ ಹಿತಕ್ಕೆ ಉಪಯೋಗಿಸುವ ದೃಷ್ಟಿ, ರಾಜ್ಯದ ಪೀಳಿಗೆ ಬಲಿಷ್ಟವಾಗಬೇಕೆಂಬ ಹಿರಿಯಾಸೆ. ಈ ಎಲ್ಲ ಕಾರಣಗಳಿಂದ ಸಮತಾವಾದ ಸಿದ್ಧಾಂತವನ್ನು ನಿರೂಪಿಸಿದ್ದಾನೆ. ಅಂತರಾಷ್ಟ್ರೀಯ ಮಹಿಳಾವರ್ಷವನ್ನು ಆಚರಿಸುತ್ತಿರುವ ನಾವು ಪ್ಲೇಟೊ, ಸ್ತ್ರೀಯರ ಉದ್ಧಾರ ಹಾಗೂ ಅವರ ಏಳ್ಗೆಯ ಬಗೆಗೆ ಹೇಳಿರುವ ಮಾತುಗಳನ್ನು ಗಮನಿಸಬೇಕು.

೯. ಶೈಕ್ಷಣಿಕ ಸಿದ್ಧಾಂತ

ಸಮತಾವಾದ ಸಿದ್ಧಾಂತ ನಿಷ್ಕ್ರಿಯ (**Negative**) ವಾದರೆ ಶೈಕ್ಷಣಿಕ ಸಿದ್ಧಾಂತ ಸಕ್ರಿಯ (**Positive**) ವಾಗಿದೆ. ನಾಗರಿಕರನ್ನು ಉತ್ತಮಗೊಳಿಸಲು ಈ ಎರಡು ಸಿದ್ಧಾಂತಗಳಲ್ಲಿ ಶೈಕ್ಷಣಿಕ ಸಿದ್ಧಾಂತಕ್ಕೆ ಬಹಳ ಮಹತ್ವ

ವಿತ್ತಿದ್ದಾನೆ. ರಾಜ್ಯವನ್ನು ಒಕ್ಕಟ್ಟು ಶಕ್ತಿ-ಸಾಮರ್ಥ್ಯ ಗಳಿಂದ ಭದ್ರಪಡಿಸಬೇಕಾದರೆ ಆಳುವವರು ಶಿಕ್ಷಣವನ್ನು ಪ್ರಜೆ ಗಳ ಪ್ರವೃತ್ತಿಯನ್ನು ಸರಿಯಾದ ದೆಸೆಗೆ ತಿರುಗಿಸುವ ಸಾಧನ ವನ್ನಾಗಿ ಉಪಯೋಗಿಸಬೇಕು. ರಾಜ್ಯ ಪ್ರಥಮ ದರ್ಜೆಯ ಶಿಕ್ಷಣಸಂಸ್ಥೆ. ನಾಗರಿಕರಿಗೆ ಉತ್ತಮ ಶಿಕ್ಷಣ ಕೊಟ್ಟರೆ ಅವರು ಮುಂದೆ ಬರುವ ತೊಂದರೆಗಳನ್ನು ದೂರದೃಷ್ಟಿಯಿಂದ ಗಮನಿಸಿ ಎದುರಿಸುವ, ಧಾರ್ಷ್ಟ್ಯವನ್ನು ಪಡೆಯುತ್ತಾರೆ. ಫ್ರೆಂಚ ತತ್ತ್ವ ಜ್ಞಾನಿ ರೂಸೊ, 'ಆದರ್ಶರಾಜ್ಯ' ಗ್ರಂಥವನ್ನು ಶೈಕ್ಷಣಿಕ ಉದ್ಗ್ರಂಥವೆಂದು ಉದ್ಗಾರ ತೆಗೆದಿದ್ದಾನೆ.

'ಸದ್ಗುಣವೇ ಜ್ಞಾನ' (Virtue is knowledge) ಎಂಬ ಸಾಕ್ರೆಟೀಸನ ತತ್ತ್ವ ಪ್ಲೇಟೋನನ್ನು ಜ್ಞಾನ ಕಲಿಸಲು ಬರುತ್ತದೆ ಎಂಬ ನಿರ್ಣಯಕ್ಕೆ ಬರುವಂತೆ ಮಾಡಿತು. ಜ್ಞಾನ ಪ್ರಸಾರ ಮಾಡುವ ಶಿಕ್ಷಣ ಪದ್ಧತಿ ರಾಜ್ಯದ ಅತ್ಯವಶ್ಯಕಗಳ ಲ್ಲೊಂದು. ಸಮಾಜದಲ್ಲಿ ಸುಧಾರಣೆಯ ಕಾರ್ಯಕ್ರಮಗಳನ್ನು ಯಶಸ್ವೀ ರೀತಿಯಿಂದ ಕಾರ್ಯರೂಪದಲ್ಲಿ ತರುವುದು ಉತ್ತಮ ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯ.

ಶಿಕ್ಷಣ, ವ್ಯಕ್ತಿಗಳ ಕೈಯಲ್ಲಿ ಆಟದ ಗೊಂಬೆಯಾಗ ಬಾರದು. ಅದನ್ನು ವ್ಯಾಪಾರೀ ಮನೋವೃತ್ತಿಯಿಂದ ನಡೆಸ ಬಾರದು. ಜ್ಞಾನವನ್ನು ಸಂಪತ್ತಿಗೆ ಮಾರಿಕೊಳ್ಳುವ ಪದ್ಧತಿ ಯನ್ನು ಪ್ಲೇಟೊ ಖಂಡಿಸಿದ್ದಾನೆ. ಶಿಕ್ಷಣದ ಜವಾಬ್ದಾರಿಯನ್ನು ರಾಜ್ಯದ ಮೇಲೆ ಹೇರಿದ್ದಾನೆ. ರಾಜ್ಯವೇ ಉತ್ತಮ ಶಿಕ್ಷಣ ಪದ್ಧತಿಯನ್ನು ರಚಿಸಿ ಕಾರ್ಯರೂಪದಲ್ಲಿ ತರಬೇಕು. ಪ್ರತಿ ಯೊಬ್ಬ ವ್ಯಕ್ತಿಗೆ ಯೋಗ್ಯ ಶಿಕ್ಷಣ ದೊರೆಯುವಂತೆ ನೋಡಿ

ಕೊಳ್ಳಬೇಕು. ಕ್ರಿ.ಪೂ. ೪ನೇ ಶತಮಾನದಲ್ಲಿಯೇ ರಾಜ್ಯ ನಿಯಂತ್ರಿತ ಕಡ್ಡಾಯ ಶಿಕ್ಷಣ ಪದ್ಧತಿಯ ದೃಷ್ಟಿಯನ್ನು ಪ್ಲೇಟೋ ಪಡೆದಿದ್ದನು.

ಅಥೆನ್ಸ್ ನಗರ ಶಿಕ್ಷಣಕ್ಕೆ ಯಾವ ಸ್ಥಾನವನ್ನೂ ಕಲ್ಪಿಸಿಲ್ಲ. ಮೇಲಾಗಿ ಸ್ತ್ರೀಯರಿಗೆ ಶಿಕ್ಷಣ ಕೊಡುತ್ತಿದ್ದಿಲ್ಲ. ಸ್ತ್ರೀ-ಪುರುಷರಲ್ಲಿ ಯಾವ ಭೇದವಿಲ್ಲವೆಂದು ಪ್ಲೇಟೋ ಸ್ಪಷ್ಟಪಡಿಸಿದ್ದಾನೆ. ಸ್ತ್ರೀಯರಿಗೂ ಪುರುಷರ ಸ್ಥಾನಮಾನಗಳು ದೊರೆಯಬೇಕೆಂದು ವಾದಿಸಿದ್ದಾನೆ. ಸಮಾಜದ ಅರ್ಧಸಂಪತ್ತಾದ ಸ್ತ್ರೀ ಸಮೂಹದ ನೈಸರ್ಗಿಕ ಶಕ್ತಿಯನ್ನು ರಾಜ್ಯದ ಏಳ್ಗೆಗೆ ಉಪಯೋಗಿಸಬೇಕೆಂಬುದೇ ಆತನ ವಾದ. ಕೇವಲ ಪುರುಷರೇ ದುಡಿದರೆ ಮತ್ತು ಸ್ತ್ರೀಯರು ನಿಷ್ಕ್ರಿಯರಾಗಿ ಮನೆಯ ನಾಲ್ಕುಗೋಡೆಗಳಲ್ಲಿ ಕುಳಿತರೆ ರಾಜ್ಯಕ್ಕೆ ತುಂಬಿಬಾರದ ಹಾನಿಯಾಗುತ್ತದೆ. ಮಾನವಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿದಂತಾಗುವುದಿಲ್ಲ; ಆದಕಾರಣ ಸ್ತ್ರೀಯರಿಗೂ ಯೋಗ್ಯ ಶಿಕ್ಷಣ ಕೊಟ್ಟು ಪುರುಷರ ಸಮಾನ ಸ್ಥಾನ ಕಲ್ಪಿಸಿದ್ದಾನೆ.

ಪ್ಲೇಟೋನ ಶಿಕ್ಷಣ ಸಿದ್ಧಾಂತದಲ್ಲಿ ಎರಡು ವಿಧ:

೧. ಪ್ರಾಥಮಿಕ ಶಿಕ್ಷಣ Elementary Education)

೨. ಉಚ್ಚ ಶಿಕ್ಷಣ (Higher Education)

ಪ್ಲೇಟೋನ ರಾಜ್ಯ ನಿಯಂತ್ರಿತ ಕಡ್ಡಾಯ ಶಿಕ್ಷಣಪದ್ಧತಿ ಸಮಾಜದ ಮೂರು ವರ್ಗಗಳ ಮಕ್ಕಳಿಗೆ ಆರನೆಯ ವಯಸ್ಸಿನಿಂದ ಇಪ್ಪತ್ತನೇ ವಯಸ್ಸಿನವರೆಗೆ ಲಿಂಗಭೇದವಿಲ್ಲದೆ ಅನ್ವಯಿಸ

ಲಾಗಿದೆ. ರಾಜ್ಯ ನಡೆಸುವ ಶಿಕ್ಷಣ ಸಂಸ್ಥೆಯಲ್ಲಿ ಎಲ್ಲ ಬಾಲಕ ಬಾಲಕಿಯರು ಒಂದೆಡೆ ಇದ್ದು ಆಸ್ಥೆಯಿಂದ ಶಿಕ್ಷಣ ಪಡೆಯಬೇಕು. ಪ್ಲೇಟೋ ಎಳೆಯ ಮಕ್ಕಳಲ್ಲಿ ಬೌದ್ಧಿಕ ಹಾಗು ದೈಹಿಕ ಶಕ್ತಿಗಳು ಬೆಳೆಯುವಂತೆ ಶಿಕ್ಷಣ ಪದ್ಧತಿ ರೂಪಿಸಿದ್ದಾನೆ. ನೈತಿಕ ಹಾಗು ಧಾರ್ಮಿಕ ಭಾವನೆಗಳಿಗೂ ಮಹತ್ವವಿತ್ತಿದ್ದಾನೆ. ಬೌದ್ಧಿಕ ಬೆಳವಣಿಗೆಗೆ ಬಾಲಕ ಬಾಲಕಿಯರು ಸಂಗೀತ(Music)ವಿಷಯವನ್ನು ಅಭ್ಯಸಿಸಬೇಕು. ಅಂದರೆ ಕಾವ್ಯ, ಸಾಹಿತ್ಯ, ವಾಚನ, ಸಂಗೀತ, ವಾದ್ಯ ಮತ್ತು ಹಾಡುಗಾರಿಕೆಯನ್ನು ಕಲಿಯುವುದು. ಇಲ್ಲಿ ಸರಕಾರ ಎಚ್ಚರಿಕೆಯಿಂದ ಪಠ್ಯಪುಸ್ತಕಗಳನ್ನು ರೂಪಿಸಬೇಕು. ಎಳೆಯ ಬಾಲಕ-ಬಾಲಕಿಯರ ಮೇಲೆ ದುಷ್ಪರಿಣಾಮವನ್ನು ಬೀರುವ ಸಾಹಿತ್ಯವನ್ನು ಬಹಿಷ್ಕರಿಸಬೇಕು. ದೈಹಿಕ ಶಿಕ್ಷಣ (Gymnastics)ಪದ್ಧತಿಯನ್ನು ವಯಸ್ಸಿಗೆ ತಕ್ಕಂತೆ ಪ್ಲೇಟೋ ರೂಪಿಸಿದ್ದಾನೆ. ಎಳೆಯ ವಯಸ್ಸಿನಲ್ಲಿ ಸಂಗೀತ ಪ್ರಾಧಾನ್ಯ ಶಿಕ್ಷಣ ಕ್ರಮ ಮತ್ತು ಅನಂತರ ದೈಹಿಕ ಪ್ರಾಧಾನ್ಯ ಶಿಕ್ಷಣ ಕ್ರಮ ಪ್ಲೇಟೋ ಸೂಚಿಸಿದ್ದಾನೆ. ದೈಹಿಕ ಶಿಕ್ಷಣ ಶಿಸ್ತು ಮತ್ತು ಸದ್ಗುಣಗಳನ್ನು ವರ್ಧಿಸುವಂತೆ ನೀಡಬೇಕು. ೧೮ನೇ ವಯಸ್ಸಿನಿಂದ ೨೦ನೇ ವಯಸ್ಸಿನವರೆಗೆ ೨ ವರ್ಷ ಕಡ್ಡಾಯವಾಗಿ ಸೈನಿಕ ಶಿಕ್ಷಣ ಕೊಡುವುದು ರಾಜ್ಯದ ಹಿತದ ದೃಷ್ಟಿಯಿಂದ ಬಹಳ ಮಹತ್ವದ್ದು. ಹೀಗೆ ಪ್ರತಿಯೊಬ್ಬ ವ್ಯಕ್ತಿ ಪ್ರೌಢಾವಸ್ಥೆಗೆ ಬರುವ ಮುನ್ನ ಉತ್ತಮ ಬೌದ್ಧಿಕ ಮತ್ತು ದೈಹಿಕ ಶಿಕ್ಷಣ ಪಡೆದು ತನ್ನ ಪ್ರವೃತ್ತಿಗೆ ತಕ್ಕಂತೆ ಮುನ್ನಡೆಯಬೇಕು

ಉಚ್ಚ ಶಿಕ್ಷಣ ಕೆಲವು ಆರಿಸಲ್ಪಟ್ಟ ಮೇಧಾವಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರ ಮೀಸಲು (Selective Edu-

cation for the Gifted youth). ರಾಜ್ಯದ ಉಚ್ಚ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸಲು ಇಂಥ ಮೇಧಾವಿ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ಕೊಡಲಾಗುವುದು. ಈ ಪದ್ಧತಿಯಲ್ಲಿ ಅನೇಕ ಹಂತಗಳನ್ನು ಕಾಣುತ್ತೇವೆ.

೨೦ನೇ ವಯಸ್ಸಿನಿಂದ ೨೫ನೇ ವಯಸ್ಸಿನವರೆಗೆ ಬೌದ್ಧಿಕ ಹಾಗು ದೈಹಿಕ ಶಿಕ್ಷಣ ಕ್ರಮದಲ್ಲಿ ಉಚ್ಚ ವಿಷಯಗಳನ್ನು ಕಲಿಸುವಂತೆ ರೂಪಿಸಲಾಗಿದೆ. ಇಲ್ಲಿ ತರ್ಕಶಾಸ್ತ್ರ, ಖಗೋಳಶಾಸ್ತ್ರ ಗಣಿತಶಾಸ್ತ್ರಗಳಿಗೆ ಮಹತ್ವ ನೀಡಲಾಗಿದೆ. ಈ ಶಿಕ್ಷಣದಲ್ಲಿ ಯಶಸ್ವಿಯಾದವರಿಗೆ ೩೫ನೇ ವಯಸ್ಸಿನವರೆಗೆ ಇನ್ನೂ ಹೆಚ್ಚಿನ ತತ್ತ್ವಜ್ಞಾನ ಮತ್ತು ಡೈಲೆಕ್ಟಿಕ್ಸ ಶಿಕ್ಷಣ ನೀಡಲಾಗುವುದು. ಜ್ಞಾನಸಾಧಕರು ಒಳ್ಳೆಯದರ ಜ್ಞಾನ (Idea of the Good) ಪಡೆಯಬೇಕು. ಇಂಥ ಶಿಕ್ಷಣಕ್ರಮದಿಂದ ವಿಚಾರ ಮತ್ತು ಕೃತಿಗಳಲ್ಲಿ ಪರಿಪೂರ್ಣತೆಯನ್ನು ಪಡೆಯಲು ಸಾಧ್ಯ. ೩೫ನೇ ವಯಸ್ಸಿನಿಂದ ೫೫ನೇ ವಯಸ್ಸಿನವರೆಗೆ, ಅಂದರೆ ೧೫ವರ್ಷಗಳವರೆಗೆ ಯಶಸ್ವೀ ಜ್ಞಾನಸಾಧಕರು ರಾಜ್ಯದ ವಿವಿಧ ರಾಜಕಾರ್ಯಗಳನ್ನು ನಿರ್ವಹಿಸಬೇಕು. ಸರಕಾರದ ಆಡಳಿತ ಮತ್ತು ಯುದ್ಧಗಳಲ್ಲಿ ಅನುಭವ ಪಡೆಯಬೇಕು. ೫೦ನೇ ವಯಸ್ಸಿನಲ್ಲಿ ಯಶಸ್ವೀ ಸಾಧಕರು ರಾಜ್ಯದ ಮುಂದಾಳಾಗುತ್ತಾರೆ. ರಾಜ್ಯದಲ್ಲಿ ಶಾಂತಿ ಮತ್ತು ನ್ಯಾಯ ದೊರಕಿಸುವುದು ಅವರ ಕರ್ತವ್ಯ. ರಾಜ್ಯದಲ್ಲಿ ಹಿತಚಿಂತನೆ ಮಾಡುತ್ತ ತಮ್ಮ ಸರತಿ ಬಂದಾಗ ರಾಜ್ಯಾಡಳಿತ ನಡೆಸಬೇಕು. ಜ್ಞಾನಪಡೆದವರು ಸಮಾಜದಿಂದ ದೂರವಿರದೇ

ರಾಜಕೀಯದಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿ ಸಾರ್ವಜನಿಕ ಹಿತ ಮತ್ತು ರಾಜ್ಯಹಿತವನ್ನು ಮಾಡಬೇಕು.

ಪ್ಲೇಟೋನ ಶೈಕ್ಷಣಿಕ ಸಿದ್ಧಾಂತ ಆದರ್ಶರಾಜ್ಯವನ್ನು ಸ್ವಾವಲಂಬಿಯಾಗಿ ಮಾಡುತ್ತದೆ. ಪ್ರಾಥಮಿಕ ಶಿಕ್ಷಣ ಮುಗಿಸಿದ ಯುವಕರು ಉಚ್ಚ ಶಿಕ್ಷಣಕ್ಕೆ ಅರ್ಹತೆ ಪಡೆಯದಿದ್ದರೆ ಉತ್ಪಾದನೆ ಕಾರ್ಯದಲ್ಲಿ ತೊಡಗಿ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವಂತೆ ನೋಡಿಕೊಳ್ಳುತ್ತಾರೆ. ೨೫ನೇ ವರ್ಷದ ವರೆಗೆ ಶಿಕ್ಷಣ ಪಡೆದು ಮುಂದೆ ಜ್ಞಾನಾರ್ಜನೆ ಮಾಡದಿರುವವರು ಸೈನಿಕರಾಗಿ ರಾಜ್ಯರಕ್ಷಣೆಯ ಕಾರ್ಯದಲ್ಲಿ ನಿರತರಾಗುತ್ತಾರೆ. ೫೦ನೇ ವಯಸ್ಸಿನ ವರೆಗೆ ಒಳ್ಳೆಯದರ ಚಿಂತನೆಯಲ್ಲಿ ಕಾಲಕಳೆದವರು ತತ್ತ್ವಜ್ಞಾನಿಗಳಾಗಿ ರಾಜ್ಯವನ್ನು ಆಳುತ್ತಾರೆ. ಹೀಗೆ ರಾಜ್ಯಕ್ಕೆ ಆವಶ್ಯವಿರುವ ಉತ್ಪಾದಿಸುವ ವರ್ಗ, ಸೈನಿಕ ವರ್ಗ ಮತ್ತು ತತ್ತ್ವಜ್ಞಾನಿಗಳ ವರ್ಗ ನಿರ್ಮಿಸುವ ಶಿಕ್ಷಣ ಪದ್ಧತಿಯನ್ನು ವೈಜ್ಞಾನಿಕ ದೃಷ್ಟಿಯಿಂದ ರಚಿಸಿದ್ದಾನೆ. ಪ್ಲೇಟೋನ ಆದರ್ಶರಾಜ್ಯದ ಕಲ್ಪನೆ ಉತ್ತಮ ಶೈಕ್ಷಣಿಕ ಸಿದ್ಧಾಂತದ ಯೋಜನೆಯಲ್ಲಿ ಮುಕ್ತಾಯಗೊಳ್ಳುತ್ತದೆ.

೧೦. ಉಪಸಂಹಾರ

ಪ್ಲೇಟೋನ ಆದರ್ಶರಾಜ್ಯ ಮಾನವನಿಗೆ ನಿಲುಕದ ರಾಜ್ಯ. ಅದು ಆಕಾಶದಲ್ಲಿಯ ಮಿನುಗುವ ತಾರೆಯಂತೆ. ಮೇಲಾಗಿ ಆದರ್ಶರಾಜ್ಯ ಗ್ರಂಥ ಬರೆದು ೨೪೦೦ ವರ್ಷಗಳು ಸಂದಿವೆ.

೨೦ನೇ ಶತಮಾನದಲ್ಲಿ ಪ್ಲೇಟೋನ ಆದರ್ಶರಾಜ್ಯ ಗ್ರಂಥದ ಔಚಿತ್ಯ ಉಪಯೋಗವೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕ್ರಿ. ಪೂ. ೪ನೇ ಶತಮಾನದಲ್ಲಿ ಆ ಗ್ರಂಥ ಬರೆದಿದ್ದರೂ ಅದರ ತತ್ತ್ವಗಳಲ್ಲಿ, ಸಿದ್ಧಾಂತಗಳಲ್ಲಿ ಆಧುನಿಕತೆ ಕಾಣುತ್ತೇವೆ. ಇಂದಿನ ಜನನಾಯಕರಿಗೆ ಕಲ್ಯಾಣರಾಜ್ಯ ಸ್ಥಾಪನೆಗೆ ಮಾರ್ಗದರ್ಶನ ನೀಡುವಂತೆ ಪ್ಲೇಟೋ ತನ್ನ ಆದರ್ಶರಾಜ್ಯ ಗ್ರಂಥದಲ್ಲಿ ಸಿದ್ಧಾಂತಗಳನ್ನು ಮಂಡಿಸಿದ್ದಾನೆ.

ಪ್ಲೇಟೋನ ಆದರ್ಶರಾಜ್ಯ ತನ್ನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆವಶ್ಯಕತೆಗಳನ್ನು ಪೂರೈಸಿಕೊಂಡು ಸ್ವಾವಲಂಬನೆ ಪಡೆದ ರಾಜ್ಯ. ಸಮಾಜದ ವಿವಿಧ ವರ್ಗಗಳಿಗೆ ಅವರ ನೈಸರ್ಗಿಕ ನೈಪುಣ್ಯಕ್ಕೆ ತಕ್ಕಂತೆ ಉದ್ಯೋಗ ಹಾಗೂ ಕೌಶಲ್ಯಗಳನ್ನು ಒದಗಿಸಿ ರಾಜ್ಯದಲ್ಲಿ ಸಂಪತ್ಸಮೃದ್ಧಿ ಆಗುವಂತೆ, ಉತ್ತಮ ರಾಜ್ಯದಾಡಳಿತ ನಡೆಯುವಂತೆ ಪ್ಲೇಟೋನ ಆದರ್ಶ ರಾಜ್ಯ ರೂಪಿಸಲಾಗಿದೆ. ಇಂದಿನ ರಾಷ್ಟ್ರಗಳಿಗೂ ಇವೇ ಸಮಸ್ಯೆಗಳು ಎದುರಾಗಿವೆ. ಮಾನವ ಶಕ್ತಿಯನ್ನು ರಾಷ್ಟ್ರಹಿತದೃಷ್ಟಿಯಿಂದ ಹೇಗೆ ಉಪಯೋಗಿಸಬೇಕು, ಯಾರಿಗೆ ಎಂಥ ಕಾರ್ಯಗಳನ್ನು ಒಪ್ಪಿಸಬೇಕು ? ರಾಷ್ಟ್ರವನ್ನು ಹೇಗೆ ಸ್ವಾವಲಂಬಿಯನ್ನಾಗಿ ಮಾಡಬೇಕು ? ರಾಜ್ಯದಾಡಳಿತ ಹೇಗೆ ಉತ್ತಮ ರೀತಿಯಿಂದ ನಡೆಸಬೇಕು ? ರಾಷ್ಟ್ರದ ಶೈಕ್ಷಣಿಕ ಪದ್ಧತಿ ಎಂತಹದಿರಬೇಕು ? ಈ ಎಲ್ಲ ಆಧುನಿಕ ಸಮಸ್ಯೆಗಳಿಗೆ ಸರಿಯಾದ ಉತ್ತರ ಸಿಗುವದು ಪ್ಲೇಟೋನ ಆದರ್ಶರಾಜ್ಯ ಉದ್ಗ್ರಂಥದಲ್ಲಿ.

ಪ್ಲೇಟೋನ ಆದರ್ಶರಾಜ್ಯದಲ್ಲಿ ಮುಖ್ಯ ಸಿದ್ಧಾಂತಗಳನ್ನು ೨೦ನೇ ಶತಮಾನದಲ್ಲಿ ಹೇಗೆ ಅನ್ವಯಿಸಲು ಬರುವದೆಂಬುದನ್ನು ವಿವೇಚಿಸುವದು ಅವಶ್ಯ. ಮೊದಲೇ ವಿವರಿಸಿದಂತೆ ಸಾಮಾಜಿಕ ಹಾಗೂ ರಾಜಕೀಯ ಸಿದ್ಧಾಂತಗಳು ಸಮಾಜವನ್ನು ಮೂರು ವಿಧವಾಗಿ ಮನಶ್ಶಾಸ್ತ್ರದ ಪ್ರಕಾರ ಮತ್ತು ನೈಸರ್ಗಿಕ ಪ್ರವೃತ್ತಿಯ ಮೇರೆಗೆ ವರ್ಗೀಕರಿಸಿ ಆಯಾ ಸಮಾಜದ ವರ್ಗಗಳಿಗೆ ಸಮಾಜದ ಕಾರ್ಯಗಳನ್ನು ಒಪ್ಪಿಸಿ ರಾಜ್ಯದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ರಾಜ್ಯ ಸ್ವಾವಲಂಬಿಯಾಗುವಂತೆ ಮಾಡಿವೆ. ಇಂದಿನ ಯುಗದಲ್ಲಿ ಸಮಾಜವನ್ನು ಇಷ್ಟು ನಿಕೃಷ್ಟವಾಗಿ ಮೂರು ವರ್ಗಗಳಲ್ಲಿ ವರ್ಗೀಕರಿಸುವದು ಅಸಾಧ್ಯ. ಆದರೆ ನೈಸರ್ಗಿಕ ಪ್ರವೃತ್ತಿಯ ಮೇರೆಗೆ ಉದ್ಯೋಗ ದೊರಕಿಸುವದು ಒಪ್ಪತಕ್ಕ ತತ್ತ್ವವಾಗಿದೆ. ಆದರಲ್ಲಿ ವ್ಯಕ್ತಿಯ ಮತ್ತು ಸಾಮಾಜಿಕ ಹಿತ ಅಡಗಿದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಮನಸ್ಸಿಗೆ ಬಂದ ಉದ್ಯೋಗ ದೊರೆತರೆ ಆತ್ಮಾನಂದ ಪಡೆಯುತ್ತಾನೆ ಮತ್ತು ಹೆಚ್ಚು ಲಕ್ಷ್ಯಗೊಟ್ಟು ಕಾರ್ಯಮಾಡುತ್ತಾನೆ. ಇದರಿಂದ ಸಮಾಜಕ್ಕೆ ಲಾಭವಾಗುವದು. ಏಕೆಂದರೆ ಸಮಾಜ ಪ್ರತಿಯೊಬ್ಬ ವ್ಯಕ್ತಿಯ ಮಾನವಶಕ್ತಿಯನ್ನು ಸರಿಯಾಗಿ ಉಪಯೋಗಿಸಿದಂತಾಗುವದು. ಇದಕ್ಕನುಗುಣವಾಗಿ ರಾಜ್ಯ ತನ್ನ ಶಿಕ್ಷಣ ಪದ್ಧತಿಯನ್ನು ರೂಪಿಸುವದು ಆವಶ್ಯವಿದೆ. ಆದರ್ಶರಾಜ್ಯದ ಶಿಕ್ಷಣಕ್ರಮ ರಾಜ್ಯದ ಆವಶ್ಯಕತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಉತ್ಪಾದಿಸುವವರ್ಗ, ಸೈನಿಕವರ್ಗ ಮತ್ತು ಆಳುವ ವರ್ಗ ನಿರ್ಮಿಸುತ್ತದೆ. ಇಂದಿನ ಕಾಲದಲ್ಲಿ

ಪ್ರತಿಯೊಂದು ರಾಷ್ಟ್ರ ತನಗೆ ಬೇಕಾದ ವಿವಿಧ ತಜ್ಞರನ್ನು, ಉದ್ಯೋಗಸ್ಥರನ್ನು, ಯಾಂತ್ರಿಕ ತಜ್ಞರನ್ನು, ಸೈನಿಕರನ್ನು, ಕುಶಲಕರ್ಮಿಗಳನ್ನು ಇನ್ನಿತರ ವ್ಯಕ್ತಿಗಳನ್ನು ರಾಷ್ಟ್ರಸೇವೆಗೆ ಸಿದ್ಧರನ್ನಾಗಿ ಮಾಡುವಂತೆ ಶಿಕ್ಷಣ ಪದ್ಧತಿ ರೂಪಿಸುವದು ಅತ್ಯಾವಶ್ಯಕ. ಶಿಕ್ಷಣ ಮತ್ತು ಉದ್ಯೋಗಗಳ ನಡುವೆ ಹೊಂದಾಣಿಕೆಯಾಗಬೇಕು. ಅಂದರೆ ಶಿಕ್ಷಣ ಪದ್ಧತಿ ರಾಷ್ಟ್ರಹಿತ ಸಾಧಿಸಿದಂತಾಗುವದು. ಹೀಗೆ ಆದರ್ಶರಾಜ್ಯ ಗ್ರಂಥದ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಸಿದ್ಧಾಂತಗಳು ಇಂದಿನ ರಾಷ್ಟ್ರಗಳಿಗೆ ಮಾರ್ಗದರ್ಶನ ನೀಡುವಂತೆ ಇವೆ.

ಆದರ್ಶರಾಜ್ಯದ ಸಮತಾವಾದ ಸಿದ್ಧಾಂತವು ಕ್ರಾಂತಿಕಾರಿಯಾಗಿದೆ ಮತ್ತು ಇಂದಿನ ಯುಗದಲ್ಲಿ ಪೂರ್ಣವಾಗಿ ಕಾರ್ಯರೂಪದಲ್ಲಿ ತರುವದು ಅಸಾಧ್ಯವೆಂದು ಕಂಡುಬರುತ್ತದೆ. ಆದಾಗ್ಯೂ ಅದರ ತಿರುಳನ್ನು ಅರಿತುಕೊಳ್ಳುವದು ವಿಹಿತ. ಪ್ಲೇಟೊ ಆಳುವ ವರ್ಗವನ್ನು (Guardians) ಕುಟುಂಬ ಮತ್ತು ಆಸ್ತಿಯ ವ್ಯಾಮೋಹಗಳಿಂದ ದೂರವಿರಿಸಲು ಸಮತಾವಾದ ಸಿದ್ಧಾಂತ ರೂಪಿಸಿದನು. ಕುಟುಂಬ ಮತ್ತು ಆಸ್ತಿಯ ವ್ಯಾಮೋಹ ಮನುಷ್ಯರನ್ನು ಸ್ವಾರ್ಥಪರರನ್ನಾಗಿ ಮಾಡುತ್ತಿವೆ. ರಾಷ್ಟ್ರಹಿತಕ್ಕೆ ಧಕ್ಕೆ ಉಂಟಾಗುತ್ತದೆ. ಆದಕಾರಣ ಇಂಥ ಕ್ರಾಂತಿಕಾರಿ ತತ್ವವನ್ನು ಪ್ರತಿಪಾದಿಸಿದ್ದಾನೆ. ಇಂದಿನ ಪ್ರಜಾಪ್ರಭುತ್ವದ ಆಳರಸರಾದ ಮಂತ್ರಿಗಳು ಪ್ಲೇಟೋನ ಕಿವಿಮಾತನ್ನು ಲಕ್ಷ್ಯದಲ್ಲಿಡಬೇಕು. ಆಳುವವರ್ಗ ನಿಸ್ವಾರ್ಥ

ದೃಷ್ಟಿಯಿಂದ ರಾಷ್ಟ್ರಸೇವೆ ಸಲ್ಲಿಸಬೇಕು. ರಾಜ್ಯದಾಡಳಿತ ನಡೆಸುವವರು ಜ್ಞಾನಸಂಪನ್ನರೂ, ಗುಣಸಂಪನ್ನರೂ ಇರಬೇಕೆಂದು ತತ್ತ್ವಜ್ಞಾನಿ ಅರಸು ಸಿದ್ಧಾಂತದಲ್ಲಿ ಪ್ಲೇಟೋ ಪ್ರತಿಪಾದಿಸಿದ್ದನ್ನು ನೆನಪಿನಲ್ಲಿಡಬೇಕು ಆಗ ಮಾತ್ರ ರಾಜ್ಯದ ಆಡಳಿತ ಯಂತ್ರ ಸುಗಮವಾಗಿ ನಡೆದು ಸರ್ವದೃಷ್ಟಿಯಿಂದ ರಾಜ್ಯ ಮುನ್ನಡೆಯುತ್ತದೆ. ಇಂಥ ಸುಜ್ಞಾನಿಗಳು ಆಳುತ್ತಿರುವಾಗ ಮಾತ್ರ ಕಲ್ಯಾಣರಾಜ್ಯದ ಕನಸು ನನಸಾಗುತ್ತದೆ. ಮೇಲಾಗಿ ಸಮತಾವಾದ ಸಿದ್ಧಾಂತದಲ್ಲಿ ಪ್ಲೇಟೋ ಸ್ತ್ರೀ-ಪುರುಷ ಸಮಾನತೆಯನ್ನು ಸಮರ್ಥರೀತಿಯಿಂದ ಪ್ರತಿಪಾದಿಸಿದ್ದಾನೆ. ೧೯೭೫ ಅಂತರರಾಷ್ಟ್ರೀಯ ಮಹಿಳಾವರ್ಷವೆಂದು ಸ್ತ್ರೀ–ಪುರುಷ ಸಮಾನತೆಯ ತತ್ತ್ವವನ್ನು ಎತ್ತಿಹಿಡಿಯಲು ಸಂಯುಕ್ತರಾಷ್ಟ್ರ ಸಂಘ ಸಾರಿತು. ೨೦ನೇ ಶತಮಾನದ ಉತ್ತರಾರ್ಧದಲ್ಲಿ ನಾವು ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದೂ, ಸುಮಾರು ೨೪೦೦ ವರ್ಷಗಳ ಹಿಂದೆಯೇ ಪ್ಲೇಟೋ ಇಂಥ ಕ್ರಾಂತಿಕಾರಕ ತತ್ವ ಪ್ರತಿಪಾದಿಸಿದ್ದನ್ನು ಮರೆಯಬಾರದು. ಹೀಗೆ ಪ್ಲೇಟೋನ ಆದರ್ಶರಾಜ್ಯ ಗ್ರಂಥದಲ್ಲಿಯ ನ್ಯಾಯಸಿದ್ಧಾಂತ, ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಗಳು, ಸಮತಾವಾದ ಸಿದ್ಧಾಂತ, ತತ್ತ್ವಜ್ಞಾನಿ ಅರಸ ಸಿದ್ಧಾಂತ ಮತ್ತು ಶೈಕ್ಷಣಿಕ ಸಿದ್ಧಾಂತ— ಈ ಎಲ್ಲ ಸಿದ್ಧಾಂತಗಳಲ್ಲಿ ಆಧುನಿಕತೆಯನ್ನು ವಿಶ್ವವ್ಯಾಪಕತೆಯನ್ನು ಕಾಣುತ್ತೇವೆ. ಈ ತತ್ತ್ವಗಳನ್ನು ಸಂಪೂರ್ಣವಾಗಿ ಕಾರ್ಯರೂಪದಲ್ಲಿ ತರಲು ಸಾಧ್ಯವಾಗದಿದ್ದರೂ, ಸಾಧ್ಯವಿದ್ದ

ಮುಟ್ಟಿಗೆ ಆಚರಣೆಯಲ್ಲಿ ತರುವದು ರಾಷ್ಟ್ರಹಿತದ ದೃಷ್ಟಿಯಿಂದ ವಿಹಿತ. ರಾಷ್ಟ್ರದ ಉನ್ನತ ಸ್ಥಾನದಲ್ಲಿದ್ದವರು, ರಾಷ್ಟ್ರದ ಆಡಳಿತ ಸೂತ್ರಧಾರರು ಮತ್ತು ಜನನಾಯಕರು ಪ್ಲೇಟೋನ ಆದರ್ಶರಾಜ್ಯದ ಸಿದ್ಧಾಂತಗಳನ್ನೂ ಮನನಮಾಡಿ ಕಲ್ಯಾಣ ರಾಜ್ಯ ಅರ್ಥಾತ್ ರಾಮರಾಜ್ಯ ಸ್ಥಾಪನೆಮಾಡಲು ಪ್ರಯತ್ನಿಸುವರೆಂದು ಹಾರೈಸುವೆ.

* * *

ಉಪನ್ಯಾಸ ಗ್ರಂಥಮಾಲೆಯು

ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಕುಂಟುತ್ತಿರುವ ಕೈಮಗ್ಗದ ಉದ್ದಿಮೆ

—ಈರಣ್ಣ ಹಟ್ಟಿ

೨. ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು

—ಬಿ. ಎಸ್. ನಂದ್ಯಾಳ

೩. ಪಂಚತಂತ್ರದ ಕಥೆಗಳು

—ವರದರಾಜ ಹುಯಿಲಗೋಳ

೪. ಪಂಪಕವಿ ಚಿತ್ರಿಸಿದ ಭೀಷ್ಮರು

—ಬಿ. ಸಿ. ಜವಳಿ

೫. ಮದುವೆ ಮತ್ತು ಮಹಿಳೆ

—ನೀಲಮ್ಮ ಕತ್ನಳ್ಳಿ

೬. ವೀರಶೈವಾಮೃತ ಮಹಾಪುರಾಣ

—ಕಾಶೀಪುಟ್ಟಸೋಮಾರಾಧ್ಯ

೭. ದನಗಳ ರೋಗಗಳು ಹಾಗು ಅವುಗಳ
ನಿವಾರಣೋಪಾಯಗಳು

—ರಾಮರಾವ್ ಜ್ಯೋತಿ

೮. ಕವಯಿತ್ರಿ ಮಹಾದೇವಿ ವರ್ಮಾ

—ಎಸ್. ಜಿ. ಇಟಗಿ

೯. ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಕೃತ
ಬ್ಯಾಂಕುಗಳ ಪಾತ್ರ

—ಎ. ಎಂ. ಎರನಾಳ

೧೦. ಕನ್ನಡದಲ್ಲಿ ಪ್ರವಾಸ ಸಾಹಿತ್ಯ

—ಜಿ. ಎಸ್. ವಡಗಾಂವಿ

ಪ್ರಸಾರಾಂಗ-ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩